ಪಟ್ಟಣ ಸಹಕಾರ

ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 11
ಸಂಚಿಕೆ : 3
ಜುಲೈ, ಆಗಸ್ಟ್,
ಸೆಪ್ಟೆಂಬರ್: 2023
ಪುಟಗಳು : 44

ಗ್ಯಾರಂಟಿ ಯೋಜನೆಗಳ ಭಾಗ್ಯ: ಸಮಾನತೆಯ ಹಾದಿಯಲ್ಲಿ ರಾಜ್ಯ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,

ಶ್ರೀ ಡಿ.ಕೆ. ಶಿವಕುಮಾರ
ಮಾನ್ಯ ಉಪಮುಖ್ಯಮಂತ್ರಿಗಳು,

ಶತಮಾನೋತ್ಸವ ಸಂಭ್ರಮದಲ್ಲಿ...

ಶ್ರೀ. ಬಸವೇಶ್ವರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್, ರಾಣೇಬೆನ್ನೂರು

ದಿ ಅಕ್ಕಿ ಆಲೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್

ದಿನಾಂಕ : 14.06.2023 ರಂದು ಸಹಕಾರ ಸಮೃದ್ಧಿ ಸೌಧ ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರಿಂದ ಶಂಕು ಸ್ಥಾಪನೆ. ಈ ಸಂದರ್ಭದಲ್ಲಿ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ, ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲ, ವಸತಿ ಮತ್ತು ವಕ್ಫ್ ಸಚಿವರಾದ ಶ್ರೀ ಜಮೀರ್ ಅಹಮದ್ ಖಾನ್, ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರಾದ ಶ್ರೀ ಶಿವಾನಂದ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

ದಿನಾಂಕ: 22.06.2023ರಂದು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಆಡಳಿತ ಮಂಡಳಿ ಸಭಾಂಗಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ಮಾನ್ಯ ಮಹಾಮಂಡಳದ ಅಧ್ಯಕ್ಷರು ಹಾಗೂ ಸಚಿವರಾದ ಶ್ರೀ ಎಚ್.ಕೆ. ಪಾಟೀಲರವರು ಮತ್ತು ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ನಂತರ ಸಚಿವರುಗಳಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಹಾಮಂಡಳದ ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರುಗಳು ಪಾಲ್ಗೊಂಡಿದ್ದರು.

ದಿನಾಂಕ:25.07.2023ರಂದು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ ಬಿ.ಒ.ಎಂ. ಸದಸ್ಯರುಗಳಿಗೆ ಜರುಗಿದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ರುದ್ರೇಗೌಡ, ಶ್ರೀ ರಾಜಕುಮಾರ ಬಾದವಾಡಗಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಆರ್‌ಬಿಐ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ, ಅಪೆಕ್ಸ್ ಬ್ಯಾಂಕ ನಿವೃತ್ತ ಅಧಿಕಾರಿ ಶ್ರೀ ಎಸ್.ಜಿ. ಕುಲಕರ್ಣಿ, ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಸಂಪಾದಕೀಯ

ಆತ್ಮೀಯ
ಸಹಕಾರಿ
ಬಂಧುಗಳೇ...

▸▸ ಎಚ್.ಕೆ. ಪಾಟೀಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರಕಾರ ಜಾರಿಗೊಳಿಸಿರುವುದು ಜಗತ್ತಿನಾದ್ಯಂತ ಬಹು ದೊಡ್ಡ ಅಲೆ ಎಬ್ಬಿಸಿದೆ. ನಮ್ಮಲ್ಲಿ ಅನುಷ್ಠಾನಗೊಳಿಸಿರುವ ಐದು ವಿಶಿಷ್ಟ ಗ್ಯಾರಂಟಿ ಯೋಜನೆಗಳು ದೇಶದ, ವಿದೇಶದ ಗಮನ ಸೆಳೆದಿದೆ. ರಾಜ್ಯದಲ್ಲಿ ಎಲ್ಲ ವರ್ಗದ ಮಹಿಳೆಯರು ಸಾರ್ವಜನಿಕ ಬಸ್‌ಗಳಲ್ಲಿ ಉಚಿತವಾಗಿ ಓಡಾಡುವ ಶಕ್ತಿ ಯೋಜನೆಯನ್ನು ಫ್ರೀ ಟು ಟ್ರಾವೆಲ್ ಎಂದು ಬಣ್ಣಿಸಿರುವ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಇದನ್ನು ಜಗತ್ತಿನಲ್ಲಿಯೇ ವಿನೂತನ ಯೋಜನೆ ಎಂದು ಬಣ್ಣಿಸಿದೆ.

ಕುಟುಂಬಗಳು ಕನಿಷ್ಠ ಮೂಲ ಆದಾಯ, ಅಗತ್ಯ ಸೌಲಭ್ಯ ಹೊಂದುವ ಮೂಲಕ ಘನತೆಯಿಂದ ಬಾಳುವಂತಾಗಬೇಕು

ನಮ್ಮ ಸುತ್ತಲಿನ ಸಮಾಜದಲ್ಲಿನ ಪ್ರತಿ ಕುಟುಂಬಕ್ಕೂ ಅನ್ನ, ನೀರು, ಸೂರು, ಶಿಕ್ಷಣ, ವೈದ್ಯಕೀಯ ಹಾಗೂ ಜೀವನಾವಶ್ಯಕ ಸೌಲಭ್ಯಗಳ ಅಗತ್ಯವಿದೆ. ಈ ರೀತಿ ಅಗತ್ಯ ಸೌಲಭ್ಯ ಹೊಂದುವುದು, ಘನತೆಯಿಂದ ಬಾಳುವುದು ಆ ಕುಟುಂಬಗಳ ಹಕ್ಕು. ಇದು ಸಾಧ್ಯವಾಗಬೇಕಿದ್ದಲ್ಲಿ ಕುಟುಂಬಗಳು ಕನಿಷ್ಠ ಮೂಲ ಆದಾಯವನ್ನು ಹೊಂದಿರಬೇಕು. ಅದು ಸಾಧ್ಯವಾದಲ್ಲಿ ನಮ್ಮ ಸಮಾಜ ಆರ್ಥಿಕವಾಗಿ ಸದೃಢಗೊಳ್ಳಲಿದೆ. ಇದನ್ನೇ ಯೂನಿವರ್ಸಲ್ ಬೇಸಿಕ್ ಇನ್‌ಕಂ ಅಥವ ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯಾಗಿದೆ.

ಇದು ಹೊಸದಾದ ಕಲ್ಪನೆಯೇನು ಅಲ್ಲ, ಇದಕ್ಕೆ ಶತಮಾನಗಳ ಹಿನ್ನೆಲೆಯಿದೆ. ಎಂಟನೇ ಶತಮಾನದಲ್ಲಿಯೇ ನಮ್ಮ ಕಲ್ಯಾಣವನ್ನು ಆಳುತ್ತಿದ್ದ ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿಯಾಗಿದ್ದ ಬಸವಣ್ಣ ಜನರ ಕಾಯಕದಿಂದ ಗಳಿಸಿದ ತೆರಿಗೆಯ ಒಂದು ಪಾಲನ್ನು ದಾಸೋಹದ ಮೂಲಕ ಅಗತ್ಯ ಜನರಿಗೆ ನೀಡತೊಡಗಿದ. ಈ ಕಾರಣದಿಂದಾಗಿಯೇ ಕಲ್ಯಾಣ ರಾಜ್ಯ ಸುಭಿಕ್ಷವಾಗಿತ್ತು. ಈ ಬಸವಣ್ಣನ ಈ ಕ್ರಾಂತಿಕಾರಿ ಪ್ರಯೋಗ ಅಂದು ಉತ್ತರದ ಕಾಶ್ಮೀರದಿಂದ ದಕ್ಷಿಣದ ತುದಿಯವರೆಗೂ ಹಬ್ಬಿತ್ತು.

ಕೆಲ ವರ್ಷಗಳ ಹಿಂದೆ ಪೂರ್ವ ಯೂರೋಪ್ ದೇಶಗಳಲ್ಲಿ ಇದನ್ನು ಜಾರಿಗೆ ತರಲಾಯಿತು. ನಂತರದ ದಿನಗಳಲ್ಲಿ ಆ ದೇಶದ ಜನರ ತಲಾ ಆದಾಯ ಹೆಚ್ಚಾಗಿದ್ದು ಮಾತ್ರವಲ್ಲ, ದೇಶದ ಜಿ.ಡಿ.ಪಿ. ತುಸು ಏರಿಕೆಯಾದ ಬಗ್ಗೆ ವರದಿಗಳಿವೆ.

ಇಂಥದೊಂದು ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯನ್ನು ಐದು ವಿಶಿಷ್ಟ ಗ್ಯಾರಂಟಿ ಯೋಜನೆಗಳ ಮೂಲಕ ಸಾಕಾರಗೊಳಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರಕಾರ ಜಾರಿಗೊಳಿಸಿರುವುದು ಜಗತ್ತಿನಾದ್ಯಂತ ಬಹು ದೊಡ್ಡ ಅಲೆ ಎಬ್ಬಿಸಿದೆ. ನಮ್ಮಲ್ಲಿ ಅನುಷ್ಠಾನಗೊಳಿಸಿರುವ ಐದು ವಿಶಿಷ್ಟ ಗ್ಯಾರಂಟಿ ಯೋಜನೆಗಳು ದೇಶದ, ವಿದೇಶದ ಗಮನ ಸೆಳೆದಿದೆ. ರಾಜ್ಯದಲ್ಲಿ ಎಲ್ಲ ವರ್ಗದ ಮಹಿಳೆಯರು ಸಾರ್ವಜನಿಕ ಬಸ್‌ಗಳಲ್ಲಿ ಉಚಿತವಾಗಿ ಓಡಾಡುವ ಶಕ್ತಿ ಯೋಜನೆಯನ್ನು ಫ್ರೀ ಟು ಟ್ರಾವೆಲ್ ಎಂದು ಬಣ್ಣಿಸಿರುವ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಇದನ್ನು ಜಗತ್ತಿನಲ್ಲಿಯೇ ವಿನೂತನ ಯೋಜನೆ ಎಂದು ಬಣ್ಣಿಸಿದೆ. ಈಗಾಗಲೇ ವಿದೇಶಗಳ ಹಲವು ಆರ್ಥಿಕ ತಜ್ಞರು, ವಿಷಯ ತಜ್ಞರು ಇದರ ಬಗ್ಗೆ ವಿಸ್ತೃತ ಅಧ್ಯಯನ ನಡೆಸಲು ರಾಜ್ಯಕ್ಕೆ ಆಗಮಿಸುತ್ತಿರುವ ವರದಿಗಳಿವೆ.

ಸರ್ಕಾರದ ಈ ಆರ್ಥಿಕ ಪ್ರಯೋಗ ಸಫಲಗೊಳ್ಳಲಿ. ಹಿಂದಿನ ಕೆಲ ನಿರರ್ಥಕ ಆರ್ಥಿಕ ಪ್ರಯೋಗಗಳಿಂದಾಗಿ ಬಡತನ, ನಿರುದ್ಯೋಗ ಹೀಗೆ ಹಲವಾರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ನಾಡಿನ ಜನಕ್ಕೆ ಈ ಯೋಜನೆಗಳ ಅನುಷ್ಠಾನದಿಂದಾಗಿ ತುಸು ನೆಮ್ಮದಿ ದೊರೆಯಲಿ ಎಂದು ಆಶಿಸುತ್ತೇನೆ.

ಒಳಪುಟಗಳಲ್ಲಿ

ಗ್ಯಾರಂಟಿ ಯೋಜನೆಗಳ ಭಾಗ್ಯ : ಸಮಾನತೆಯ ಹಾದಿಯಲ್ಲಿ ರಾಜ್ಯ 5

ಕರುನಾಡ ಬಜೆಟ್ ಮೆರುಗು : ರೂ. 21 ಕೋಟಿಯಿಂದ ರೂ. 3 ಲಕ್ಷ ಕೋಟಿವರೆಗೆ ಬಂದು ನಿಂತ ಲೆಕ್ಕ! 7

ಕನಸಿನ ಮನೆ ನಿಮ್ಮದಾಗಲು ಉತ್ತಮ ಕ್ರೆಡಿಟ್ ಸ್ಕೋರ್ ಪಡೆಯುವುದು ಹೇಗೆಂದು ತಿಳಿಯಿರಿ.......... 9

ದಂಡ ಬಡ್ಡಿಯನ್ನು ನಿಷೇಧಿಸಿದ ಆರ್‌ಬಿಐ : ಜನವರಿಯಿಂದ ಜಾರಿ............... 11

ಬ್ಯಾಂಕುಗಳಿಂದ ಕಳೆದ 5 ವರ್ಷಗಳಲ್ಲಿ ಉದ್ಯಮಿಗಳ ಒಟ್ಟು ರೂ.10.57 ಲಕ್ಷ ಕೋಟಿ ಸಾಲ ಮನ್ನಾ : ಆರ್‌ಬಿಐ........................ 13

ಬ್ಯಾಂಕುಗಳಲ್ಲಿದೆ ಸಾವಿರಾರು ಕೋಟಿ ರೂ ವಾರಸುದಾರರಿಲ್ಲದ ಹಣ.............15

ಈ ವರ್ಷವೊಂದರಲ್ಲೇ ಭಾರತದಿಂದ 6,500ಕ್ಕೂ ಹೆಚ್ಚು ಲಕ್ಷಾಧಿಪತಿಗಳು ವಿದೇಶಕ್ಕೆ ವಲಸೆ.......... 18

ಯಾವಾಗ ಬಂದೀತು ಬಡ್ಡಿ ಇಳಿಕೆಯ ಕಾಲ? 19

ಅಮೆರಿಕಾ ಫೆಡರಲ್ ಬಡ್ಡಿ ದರ ಹೆಚ್ಚಿಸಿದರೆ ಭಾರತದ ಆರ್ಥಿಕತೆಯ ಮೇಲೆ ಆಗುವ ಪರಿಣಾಮಗಳೇನು...?.......... 21

ರೂಪಾಯಿಯಲ್ಲಿ ಅಂತರರಾಷ್ಟ್ರೀಯ ವಹಿವಾಟು ನಡೆಸುವ ಸಾಕಾರಕ್ಕೆ ಬೇಕು ಸುದೀರ್ಘ ಅವಧಿ..........24

ನೀವು ಎಷ್ಟು ಬ್ಯಾಂಕ್ ಖಾತೆಗಳು ಅಥವಾ ಉಳಿತಾಯ ಖಾತೆಗಳನ್ನು ಹೊಂದಿರಬೇಕು?.......... 27

1% ಶ್ರೀಮಂತರ ಬಳಿ 40.5% ದೇಶದ ಸಂಪತ್ತು 29

ಶತಮಾನೋತ್ಸವ ಸಂಭ್ರಮದಲ್ಲಿ ಶ್ರೀ ಬಸವೇಶ್ವರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ರಾಣೇಬೆನ್ನೂರು..........30

ಶತಮಾನೋತ್ಸವ ಸಂಭ್ರಮದಲ್ಲಿ ದಿ ಅಕ್ಕಿ ಆಲೂರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್..........33

ಸಹಕಾರದ ಬಗ್ಗೆ ಗಣ್ಯರ ಅನಿಸಿಕೆ.......... 39

ಪಟ್ಟಣ ಸಹಕಾರ ಬ್ಯಾಂಕಿಂಗ್ ಪ್ರಪಂಚ

ಸಂಪುಟ : 11 ಸಂಚಿಕೆ : 03

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ

ಜುಲೈ, ಆಗಸ್ಟ್, ಸೆಪ್ಟೆಂಬರ್-2023

ಶ್ರೀ ಎಚ್.ಕೆ. ಪಾಟೀಲ

ಗೌರವಾಧ್ಯಕ್ಷರು

ಶ್ರೀ ಬಿ.ಎಸ್. ಪರಮಶಿವಯ್ಯ

ಉಪಾಧ್ಯಕ್ಷರು

ಶ್ರೀ ಪುಂಡಲೀಕ ಎನ್. ಕೇರೂರೆ

ಮುಖ್ಯ ಕಾರ್ಯನಿರ್ವಹಣಾಧಿಕಾರಿ/ ಸಂಪಾದಕರು

ಸಂಚಿಕೆ ನಿರ್ವಹಣೆ / ವಿನ್ಯಾಸ :

ವರ್ಣ ಕಮ್ಯೂನಿಕೇಷನ್

ಪ್ರಕಟಣೆ :

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,

ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

ದೂರವಾಣಿ :

080-22233662, 080-22279574

ಫ್ಯಾಕ್ಸ್ : 080-22220774

ಇ-ಮೇಲ್ :

editorkubf@gmail.com

ಅಂತರ್ಜಾಲ : www.kubfed.com

ಮುದ್ರಣ : ನವರತ್ನ ಪ್ರಿಂಟರ್ಸ್, ಬೆಂಗಳೂರು.

ಗ್ಯಾರಂಟಿ ಯೋಜನೆಗಳ ಭಾಗ್ಯ : ಸಮಾನತೆಯ ಹಾದಿಯಲ್ಲಿ ರಾಜ್ಯ

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸರ್ಕಾರ ನೂರು ದಿನ ಪೂರೈಸುವುದರೊಂದಿಗೆ ತಾನು ಜನರಿಗೆ ನೀಡಿದ್ದ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಆ ಮೂಲಕ ನುಡಿದಂತೆ ನಡೆದಿದೆ...ನಡೆಯುತ್ತಿದೆ. ಇದರೊಂದಿಗೆ ಹಲವು ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಜೊತೆ ಜೊತೆಗೆ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು, ಕನಕದಾಸರು, ನಾರಾಯಣಗುರು ಮುಂತಾದ ದಾರ್ಶನಿಕರು ತೋರಿದ ಸಮಾನತೆಯ ಹಾದಿಯಲ್ಲಿ ನಾಡನ್ನು ಮುನ್ನಡಿಸಿಕೊಂಡು ಹೋಗುವ ಸಂಕಲ್ಪ ಹೊಂದಿದೆ.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆಗಳು ತಲುಪಬೇಕೆಂಬ ಆಶಯದೊಂದಿಗೆ ಆರಂಭಿಸಿದ ಪಯಣಕ್ಕಿಂದು ಈಗ ಶತಕ ಸಂಭ್ರಮ ತುಂಬಿದೆ. ತನ್ನ ಗ್ಯಾರಂಟಿಗಳ ಈಡೇರಿಕೆಯ ಜೊತೆಗೆ ಸಿದ್ದರಾಮಯ್ಯನವರು ಸರ್ಕಾರವನ್ನು ಅಭಿವೃದ್ಧಿಯ ರಥವನ್ನು ಮುನ್ನಡೆಸುತ್ತಿದ್ದಾರೆ.

ನವ ಕರ್ನಾಟಕ ನಿರ್ಮಾಣದ ಸಂಕಲ್ಪದೊಂದಿಗೆ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಂದ ನಾಡಿನ ಕೋಟ್ಯಾಂತರ ಬಡ ಕುಟುಂಬಗಳ ಭಾಗ್ಯದ ಬಾಗಿಲು ತೆರೆದಿದೆ.

ಅನ್ನಭಾಗ್ಯ : 2013ರಲ್ಲೇ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ್ದರು. ಪ್ರಸ್ತುತ ಈ ಯೋಜನೆಯನ್ನು ಮತ್ತಷ್ಟು ಬಲಪಡಿಸಲಾಗಿದ್ದು, ಬಡತನ ರೇಖೆಯಿಂದ ಕೆಳಗಿರುವ ಫಲಾನುಭವಿಗಳಿಗೆ ತಲಾ 10 ಕೆಜಿ ಆಹಾರಧಾನ್ಯವನ್ನು ಪ್ರತಿ ತಿಂಗಳು ವಿತರಿಸುತ್ತಿದೆ. ಆದರೆ, ಕಾರಣಾಂತರಗಳಿಂದ 5 ಕೆಜಿ ಆಹಾರಧಾನ್ಯ ಹಾಗೂ ಉಳಿದ 5 ಕೆಜಿ ಆಹಾರ ಧಾನ್ಯಗಳ ಮೊತ್ತವನ್ನು ನೇರ ನಗದು ವರ್ಗಾವಣೆ ರೂಪದಲ್ಲಿ ಫಲಾನುಭವಿಗಳ ಖಾತೆಗೆ ವರ್ಗಾಯಿಸಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಿಂದಾಗಿ ಬಡತನ ರೇಖೆಗಿಂತ ಕೆಳಗಿರುವ 4.42 ಕೋಟಿ ಫಲಾನುಭವಿಗಳಿಗೆ ಅನುಕೂಲವಾಗಿದ್ದು, ಇದಕ್ಕಾಗಿ ಅಂದಾಜು ರೂ.10 ಸಾವಿರ ಕೋಟಿಗಳು ವೆಚ್ಚವಾಗಲಿದೆ.

ಶಕ್ತಿ ಯೋಜನೆ : ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರಿ ಸ್ವಾಮ್ಯದ 4 ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯದ ಶಕ್ತಿ ಯೋಜನೆ ಜೂನ್ 11 ರಿಂದ ಜಾರಿಯಾಗಿದೆ. ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕೆಂಬ ಸದಾಶಯದೊಂದಿಗೆ ಜಾರಿಗೆ ತಂದಿರುವ ಈ

ಯೋಜನೆಯಿಂದ ದುಡಿಯುವ, ವ್ಯಾಸಂಗ ಮಾಡುವ ಹೆಣ್ಣುಮಕ್ಕಳ ಕನಸುಗಳಿಗೆ ರೆಕ್ಕೆ ಮೂಡಿಸುವ ಯೋಜನೆ ಇದಾಗಿದೆ. ಎಲ್ಲಾ ವರ್ಗದ ಮಹಿಳೆಯರಿಗೂ ಸಾಮಾನ್ಯ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಒದಗಿಸಲಾಗಿದೆ.

ಇದರಿಂದ ಮಹಿಳೆಯರು, ಶಿಕ್ಷಣ, ಉದ್ಯೋಗ, ಪ್ರವಾಸ ಮತ್ತಿತರ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶವಾಗಿದೆ. ದೂರದ ಸ್ಥಳಗಳಿಗೆ ಹೋಗಿ ಶಿಕ್ಷಣ, ಉದ್ಯೋಗ ಮಾಡಲು ಸಾಧ್ಯವಾಗಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗದಲ್ಲಿ ತೊಡಗಿಕೊಳ್ಳುವುದರಿಂದಾಗಿ ಬಡ ಮತ್ತು ಕೆಳಮಧ್ಯಮ ವರ್ಗಗಳ ಆರ್ಥಿಕ ಸಾಮರ್ಥ್ಯ ಹೆಚ್ಚಾಗಲಿದೆ. ಈ ಯೋಜನೆಗಾಗಿ ವಾರ್ಷಿಕವಾಗಿ ರೂ. 4 ಸಾವಿರ ಕೋಟಿ ವೆಚ್ಚವಾಗಲಿದೆ.

ಗೃಹಜ್ಯೋತಿ : ಗೃಹಜ್ಯೋತಿ ಯೋಜನೆಯ ಮೂಲಕ ರಾಜ್ಯದ ಜನರಿಗೆ ಇಂಧನ ಖಾತರಿ ನೀಡುವ ಯೋಜನೆಯಾಗಿದೆ. ವಿದ್ಯುತ್ ಬಿಲ್ ಭರಿಸಲು ಶಕ್ತಿ ಇಲ್ಲದ ಕಾರಣಕ್ಕೆ ಸಾವಿರಾರು ಕುಟುಂಬಗಳು ಬವಣೆ ಪಡುವುದನ್ನು ತಪ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಡಿತರ ಖಾತರಿಯಷ್ಟೇ ಇಂಧನ ಖಾತರಿಯನ್ನೂ ಈ ಯೋಜನೆ ಮೂಲಕ ಪ್ರತಿ ಕುಟುಂಬಕ್ಕೂ ಒದಗಿಸಿದ್ದಾರೆ.

ಗೃಹ ಜ್ಯೋತಿ ಯೋಜನೆಯಡಿ ರಾಜ್ಯದಲ್ಲಿನ ಪ್ರತಿ ಮನೆಗೆ ಮಾಸಿಕ ಅವರ ವಾರ್ಷಿಕ ಸರಾಸರಿ ಬಳಕೆಯ ಜತೆಗೆ ಗರಿಷ್ಠ ಶೇ. 10 ರಷ್ಟು ಹೆಚ್ಚುವರಿ ಯೂನಿಟ್‌ಗಳವರೆಗಿನ ಬಳಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಆಗಸ್ಟ್ 5 ರಂದು ಕಲಬುರಗಿಯಲ್ಲಿ ಅಧಿಕೃತವಾಗಿ ಯೋಜನೆ ಚಾಲನೆ ಪಡೆದುಕೊಂಡಿದ್ದು, ಸುಮಾರು 2 ಕೋಟಿಗೂ ಹೆಚ್ಚು ಗೃಹ ಬಳಕೆದಾರರಿಗೆ ಇದರಿಂದ ಅನುಕೂಲವಾಗಿದೆ. ಈ ಯೋಜನೆಗೆ ವಾರ್ಷಿಕ ಅಂದಾಜು ರೂ. 13,910 ಕೋಟಿ ವೆಚ್ಚವಾಗುವ ಅಂದಾಜಿಸಲಾಗಿದೆ.

ಗೃಹಲಕ್ಷ್ಮಿ : ಆರ್ಥಿಕ ದುರ್ಬಲ ಕುಟುಂಬದ ಯಜಮಾನಿಗೆ ಮಾಸಿಕ ರೂ. 2 ಸಾವಿರವನ್ನು ನೇರ ನಗದು ವರ್ಗಾವಣೆ ಮೂಲಕ ನೀಡುವ ಈ ಯೋಜನೆ ಸಿದ್ದರಾಮಯ್ಯ ಅವರ ಸರಕಾರ ಮಹಿಳೆಯರನ್ನು ನಿಜವಾದ ಅರ್ಥದಲ್ಲಿ ಗೃಹಲಕ್ಷ್ಮಿಯಾಗಿಸಿದೆ. ಈ ಯೋಜನೆ ಆಗಸ್ಟ್ 30 ರಂದು ಚಾಲನೆ ಪಡೆದುಕೊಂಡಿದ್ದು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಬಿಸಿಯೂಟ ತಯಾರಕರು, ಲಿಂಗತ್ವ ಅಲ್ಪಸಂಖ್ಯಾತರು ಮತ್ತು ಮಾಜಿ ದೇವದಾಸಿಯರೂ ಸಹ ಈ ಯೋಜನೆ ವ್ಯಾಪ್ತಿಗೆ ಸೇರಿದ್ದಾರೆ.

ಇದರಿಂದಾಗಿ ರಾಜ್ಯದ ಮಹಿಳೆಯರು ಆರ್ಥಿಕವಾಗಿ ಸಾಮರ್ಥ್ಯ ಹೊಂದಲು ಸಾಧ್ಯವಾಗಿದ್ದು, ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಕುಟುಂಬಗಳಿಗೆ ತುಸು ನೆಮ್ಮದಿ ದೊರೆತಿದೆ. ಈ ಯೋಜನೆಯಿಂದಾಗಿ ಮಹಿಳೆಯರು ಖರೀದಿಸುವ ಸಾಮರ್ಥ್ಯ ಹೆಚ್ಚಾಗಲಿದ್ದು, ಆರ್ಥಿಕ ಚಟುವಟಿಕೆ ಮತ್ತು ವ್ಯಾಪಾರ ವಹಿವಾಟು ಹೆಚ್ಚಾಗುತ್ತದೆ. ಈ ಯೋಜನೆಗಾಗಿ ವಾರ್ಷಿಕ ಸುಮಾರು ರೂ. 30 ಸಾವಿರ ಕೋಟಿ ವೆಚ್ಚವಾಗಲಿದ್ದು, ಇದು ಇಡೀ ದೇಶದಲ್ಲಿಯೇ ಅತೀ ದೊಡ್ಡ ಆರ್ಥಿಕ ಭದ್ರತಾ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಯುವ ನಿಧಿ : ಇನ್ನಷ್ಟೆ ಜಾರಿಯಾಗಬೇಕಿರುವ ಈ ಯೋಜನೆಯಡಿಯಲ್ಲಿ ಪದವೀಧರರು ಮತ್ತು ಡಿಪ್ಲೊಮಾ ಶಿಕ್ಷಣ ಪಡೆದ ಯುವಜನರು ನಿರೀಕ್ಷೆಯಂತೆ ಉದ್ಯೋಗ ಪಡೆಯಲು ಸಾಧ್ಯವಾಗದ ಸಂದರ್ಭದಲ್ಲಿ ಅವರಿಗೆ ಬೆನ್ನೆಲುಬಾಗಿ ನಿಲ್ಲುವ ಆಶಯದೊಂದಿಗೆ ಯುವನಿಧಿ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ. ಅವರುಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಬದುಕಿನಲ್ಲಿ ಆತ್ಮವಿಶ್ವಾಸ ತುಂಬುವುದು ಈ ಯೋಜನೆಯ ಉದ್ದೇಶವಾಗಿದೆ.

2023ರಲ್ಲಿ ಪದವಿ ಪಡೆದು 6 ತಿಂಗಳವರೆಗೆ ಉದ್ಯೋಗ ಲಭಿಸದ ಯುವಜನರಿಗೆ 2 ವರ್ಷಗಳವರೆಗೆ ಅಥವಾ ಉದ್ಯೋಗ ಸಿಗುವವರೆಗೆ ಕ್ರಮವಾಗಿ ಮಾಸಿಕ ರೂ.3,000 ಮತ್ತು ರೂ. 1,500 ನಿರುದ್ಯೋಗ ಭತ್ಯೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗುವ ನಿರೀಕ್ಷೆಯಿದೆ.

ಕರುನಾಡ ಬಜೆಟ್ ಮೆರುಗು : ರೂ. 21 ಕೋಟಿಯಿಂದ ರೂ. 3 ಲಕ್ಷ ಕೋಟಿವರೆಗೆ ಬಂದು ನಿಂತ ಲೆಕ್ಕ!

ದೇಶದಲ್ಲೇ ಅತ್ಯಂತ ಸುರಕ್ಷಿತ ಹಾಗೂ ಭೌಗೋಳಿಕವಾಗಿ ಮನಮೋಹಕವಾದ ರಾಜ್ಯ ಕರ್ನಾಟಕ. 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂಬ ಆದಿಕವಿ ಪಂಪನ ವಾಣಿಯನ್ನು ಇನ್ನಷ್ಟು ವಿಶಾಲೀಕರಿಸಿ ಹೇಳುವುದಾದರೆ, ಕನ್ನಡಿಗರಿಗೆ ಕರ್ನಾಟಕವೇ ಸರ್ವಸ್ವ. ಕರ್ನಾಟಕವೆಂದರೆ ಕನ್ನಡಿಗರ ಪವಿತ್ರ ದೇಗುಲ. ಕರ್ನಾಟಕದ ಖ್ಯಾತಿ ಇಷ್ಟಕ್ಕೇ ಸೀಮಿತವಲ್ಲ.

ಭಾರತದ ಯಾವುದೇ ರಾಜ್ಯದವರಿಗೆ ಕರ್ನಾಟಕದಲ್ಲಿ ಉದ್ಯೋಗಿಗಳಾಗಿ ನೆಲೆ ಕಂಡುಕೊಳ್ಳುವುದು ಆದ್ಯತೆಯ ವಿಚಾರ. ವಿದೇಶಿ ಕಂಪನಿಗಳಿಗೂ ಕರ್ನಾಟಕದಲ್ಲಿ ಹೂಡಿಕೆ ಮಾಡುವುದು ಪ್ರತಿಷ್ಠೆಯಾಗಿದೆ. ಯಾಕೆಂದರೆ, ಕರ್ನಾಟಕ ಆರ್ಥಿಕವಾಗಿ ಅಷ್ಟೊಂದು ಸದೃಢವಾದ ರಾಜ್ಯ.

ಜಾಗತಿಕ ಮಾರುಕಟ್ಟೆಯ ಏರಿಳಿತ, ಕೋವಿಡ್‌ನಂತಹ ಸಂಕಷ್ಟಗಳ ಹೊರತಾಗಿಯೂ ರಾಜ್ಯದ ಆರ್ಥಿಕತೆ ಸಮಾಧಾನಕರವಾಗಿಯೇ ಇದೆ. ಕಾಲದಿಂದ ಕಾಲಕ್ಕೆ ಕೈಗೊಂಡ ಆರ್ಥಿಕ ಸುಧಾರಣಾ ಕ್ರಮಗಳೇ ಈ ಪ್ರಗತಿಯ ಅಡಿಪಾಯ. ರಾಜ್ಯದಲ್ಲಿ ಸರಕಾರ ನಡೆಸಿದವರು ತೆರಿಗೆ ಮೂಲಗಳನ್ನು ಬಲಪಡಿಸುತ್ತ ಬಂದಿದ್ದಾರೆ. ಹಾಗಾಗಿ ಇವತ್ತು ದೇಶದ ವಿಕಾಸದ ಎಂಜಿನ್ ಎಂಬ ಹೆಗ್ಗಳಿಕೆಯ ಹೆಗ್ಗುರುತನ್ನು ಕರ್ನಾಟಕ ಮೂಡಿಸಿದೆ. ಇಂತಹ ಪ್ರಗತಿಪರ ರಾಜ್ಯದ ಮೊದಲ ಬಜೆಟ್‌ನ ಗಾತ್ರ 21.03 ಕೋಟಿ ರೂ. ಇತ್ತು. ಇದೀಗ ರಾಜ್ಯದ ಬಜೆಟ್‌ನ ಗಾತ್ರ 3 ಲಕ್ಷ ಕೋಟಿ ರೂ. ದಾಟಿದೆ!

ರಾಜ್ಯದ ಬಜೆಟ್‌ನ ಇತಿಹಾಸವನ್ನು ಅವಲೋಕಿಸಿದರೆ ಅಭಿವೃದ್ಧಿಯ ಪಥ ಹೇಗೆ ಸಾಗಿ ಬಂದಿದೆ ಎಂಬುದರ ಸ್ಥೂಲ ಚಿತ್ರಣ ದೊರಕುತ್ತದೆ. ರಾಜ್ಯದಲ್ಲಿ ಚುನಾಯಿತ ಸರಕಾರ ರಚನೆ ಬಳಿಕ ಮೊಟ್ಟ ಮೊದಲ ಬಜೆಟ್ ಮಂಡಿಸಿದವರು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ. ಆ ಬಳಿಕ ಪರಿಷ್ಕೃತ ಆಯವ್ಯಯಗಳೂ ಸೇರಿದಂತೆ ರಾಜ್ಯದಲ್ಲಿ ಒಟ್ಟಾರೆ 76 ಬಜೆಟ್‌ಗಳು ಮಂಡನೆಯಾಗಿವೆ. ಈ ಬಾರಿಯ ವಿಧಾನಸಭೆ ಚುನಾವಣೆಗೆ ಮೊದಲು ಫೆಬ್ರವರಿ 17ರಂದು 2023–24ನೇ ಸಾಲಿನ ಸಂಬಂಧಿಸಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 3,09,182 ಕೋಟಿ ರೂ. ಗಾತ್ರದ ಬಜೆಟ್ ಮಂಡಿಸಿದ್ದರು. ಇದೀಗ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸ ಸರಕಾರದ ಆದ್ಯತೆಗಳನ್ನು ಜನರ ಮುಂದಿಡಲು 2023–24ನೇ ಹಣಕಾಸು ವರ್ಷದ ಪರಿಷ್ಕೃತ ಬಜೆಟ್ ಮಂಡಿಸಿದ್ದಾರೆ.

ದೇಶದ ಆರ್ಥಿಕ ಶಕ್ತಿ : ಆರ್ಥಿಕಾಭಿವೃದ್ಧಿಯಲ್ಲಿ ಸಮತೋಲನ ಕಾಯ್ದು

ಕೊಂಡಿರುವ ರಾಜ್ಯ ಕರ್ನಾಟಕ. ಹಾಗಾಗಿ ದೇಶದ ಆರ್ಥಿಕತೆಗೆ ರಾಜ್ಯದ ಕೊಡುಗೆ ಅನನ್ಯವಾದುದು. ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರದ ಸ್ಥಾನದಲ್ಲಿ ಕರ್ನಾಟಕ ಇದೆ. ಗ್ಯಾರಂಟಿ ಯೋಜನೆಗಳ ಜಾರಿಗೆ ಹಾಲಿ ಸರಕಾರ ಭರವಸೆ ಇರಿಸಿಕೊಂಡಿದ್ದರೆ, ಅದಕ್ಕೆ ರಾಜ್ಯದ ಆರ್ಥಿಕ ಸ್ಥಿತಿ ಆಶಾದಾಯಕ ಆಗಿರುವುದೇ ಕಾರಣ. ಕೋವಿಡ್‌ನಂತರದಲ್ಲಿ ಆರ್ಥಿಕತೆ ಹಳಿಗೆ ಬಂದಿದೆ. ಸಂಪನ್ಮೂಲ ಸಂಗ್ರಹವೂ ಸರಿದಿಕ್ಕಿನಲ್ಲಿ ಸಾಗಿದೆ.

ದಾಖಲೆ ಬರೆದವರು : ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ದಾಖಲೆ ಸದ್ಯಕ್ಕೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿನಲ್ಲಿದೆ. ಇಬ್ಬರೂ 13 ಆಯವ್ಯಯ ಮಂಡಿಸಿರುವ ಶ್ರೇಯ ಹೊಂದಿದ್ದಾರೆ. ರಾಮಕೃಷ್ಣ ಹೆಗಡೆ ಅವರು ನಿಜಲಿಂಗಪ್ಪನವರ ಸಂಪುಟದಲ್ಲೇ ಹಣಕಾಸು ಸಚಿವರಾಗಿದ್ದರು. ಬಳಿಕ ವೀರೇಂದ್ರ ಪಾಟೀಲರ ಸಂಪುಟದಲ್ಲೂ ಹಣಕಾಸು ಖಾತೆ ನಿರ್ವಹಿಸಿದ್ದ ಹೆಗಡೆ ಈ ಅವಧಿಯಲ್ಲಿ 6 ಮುಂಗಡ ಪತ್ರ ನೀಡಿದ್ದರು. ನಂತರ ಮುಖ್ಯಮಂತ್ರಿಯಾಗಿ ಮತ್ತೆ 7 ಬಜೆಟ್‌ಮಂಡಿಸಿದ್ದರು. ಈ ಮೂಲಕ ಒಟ್ಟಾರೆ 13 ಬಜೆಟ್ ನೀಡುವುದರೊಂದಿಗೆ ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ದಾಖಲೆ ಸುದೀರ್ಘ ಕಾಲ ಹೆಗಡೆ ಹೆಸರಿಗೆ ಇತ್ತು. ನಂತರ ಸಿದ್ದರಾಮಯ್ಯ ಅವರು 2018-19ರಲ್ಲಿ 13ನೇ ಬಜೆಟ್ ಮಂಡಿಸಿ ಈ ದಾಖಲೆ ಸರಿಗಟ್ಟಿದ್ದರು. ಇವರ ನಂತರದ ಸ್ಥಾನದಲ್ಲಿ ಬಿ.ಎಸ್. ಯಡಿಯೂರಪ್ಪ, ಎಂ.ವೈ. ಘೋರ್ಪಡೆ, ವೀರಪ್ಪ ಮೊಯ್ಲಿ, ಎಸ್.ಎಂ. ಕೃಷ್ಣ ಇದ್ದಾರೆ.

* ರಾಮಕೃಷ್ಣ ಹೆಗಡೆ : 13, ಸಿದ್ದರಾಮಯ್ಯ : 13, ಬಿ.ಎಸ್. ಯಡಿಯೂರಪ್ಪ : 08, ಎಂ.ವೈ. ಘೋರ್ಪಡೆ : 07, ಟಿ.ಮರಿಯಪ್ಪ: 05, ವೀರಪ್ಪ ಮೊಯ್ಲಿ : 05, ಎಸ್.ಎಂ.ಕೃಷ್ಣ : 05

ಸರ್ಪಗಾವಲು : ನಿಧಿಯ ರಕ್ಷಣೆಗೆ ಸರ್ಪಗಾವಲು ಇರುವಂತೆ ಸಿದ್ದರಾಮಯ್ಯ ಅಧಿಕಾರದಲ್ಲಿ ಇದ್ದಾಗೆಲ್ಲ ರಾಜ್ಯದ ಬೊಕ್ಕಸದ ಕಾವಲು ಕಾಯ್ದುಕೊಂಡು ಬಂದಿದ್ದಾರೆ ಎಂಬ ಮಾತಿದೆ. ಇದು ಅತಿಶಯೋಕ್ತಿಯೇನೂ ಅಲ್ಲ. ಯಾಕೆಂದರೆ, ತೆರಿಗೆ ಸಂಗ್ರಹ ಕಟ್ಟುನಿಟ್ಟುಗೊಳಿಸುವುದರಲ್ಲಿ ಸಿದ್ದರಾಮಯ್ಯ ಎತ್ತಿದ ಕೈ. ಇವರ ಕಣ್ಣಳತೆಯಿಂದ ತೆರಿಗೆಗಳ್ಳರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಮಾತೂ ಇದೆ.

ಬಜೆಟ್ ಮೈಲುಗಲ್ಲು

1952-53: ರೂ.21.03 ಕೋಟಿ, 1957-58: ರೂ.60.28 ಕೋಟಿ, 1962-63: ರೂ. 102.93 ಕೋಟಿ, 1969-70: ರೂ.226.48 ಕೋಟಿ, 1982-83: 1,178.86 ರೂ. ಕೋಟಿ, 1985-86: ರೂ. 2,078.45 ಕೋಟಿ, 2008-09: ರೂ. 55,313.41 ಕೋಟಿ, 2012-13: ರೂ. 1,02,742 ಕೋಟಿ, 2018-19: ರೂ. 2,09,181 ಕೋಟಿ, 2022-23: ರೂ.2,65,720 ಕೋಟಿ, 2023-24: ರೂ. 3,09,182 ಕೋಟಿ.

ದಾಖಲೆ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7 ದಾಖಲೆಯ 14ನೇ ಬಜೆಟ್ ಮಂಡಿಸಿದ್ದಾರೆ. ಈ ಮೂಲಕ ಅವರು ಕರ್ನಾಟಕ ವಿಧಾನಸಭೆಯಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ಹಣಕಾಸು ಸಚಿವರು ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಮೂಲತಃ ಲಾಯರ್ ಆಗಿರುವ ಸಿದ್ದರಾಮಯ್ಯ ಹಣಕಾಸು ಖಾತೆ ನಿರ್ವಹಿಸುವ ಬಗ್ಗೆ ಕನಸು ಮನಸಿನಲ್ಲೂ ಯೋಚಿಸಿರಲಿಲ್ಲವಂತೆ. ಹಾಗಂತ ಅವರೇ ಹಲವು ಬಾರಿ ಹೇಳಿಕೊಂಡಿದ್ದಿದೆ.

1994ರಲ್ಲಿ ಜನತಾದಳದ ಸರಕಾರ ರಚನೆಯಾದಾಗ ಅಂದಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡರು ಹಣಕಾಸು ಖಾತೆಯನ್ನು ಸಿದ್ದರಾಮಯ್ಯನವರ ಹೆಗಲಿಗೆ ಹಾಕಿದ್ದರು. ಅಂದಿನಿಂದ ಸಿದ್ದರಾಮಯ್ಯ ಅವರು ವರ್ಷದಿಂದ ವರ್ಷಕ್ಕೆ ಜನಪರ ಮತ್ತು ಜನಪ್ರಿಯ ಬಜೆಟ್‌ಗಳನ್ನು ಕೊಡುತ್ತ ಹೋದರು. ವರ್ತಮಾನದಲ್ಲಂತೂ ಕರ್ನಾಟಕದ ರಾಜಕಾರಣಿಗಳಲ್ಲಿ ಹಣಕಾಸು ವಿಷಯದಲ್ಲಿ ಕರಾರುವಾಕ್ಕಾಗಿ ಮಾತನಾಡುವವರಲ್ಲಿ ಸಿದ್ದರಾಮಯ್ಯ ಅವರೇ ಅಗ್ರೇಸರ. ಅಸೆಂಬ್ಲಿಯಲ್ಲಿ ಸಿದ್ದರಾಮಯ್ಯನವರು ಹಣಕಾಸು ಪಾಠ ಮಾಡುತ್ತಿದ್ದರೆ ಶಾಸಕರೆಲ್ಲ ತದೇಕಚಿತ್ತದಿಂದ ಕೇಳಿಸಿಕೊಳ್ಳುತ್ತಾರೆ. ಹಾಗಾಗಿ ಅರ್ಥ ವ್ಯವಸ್ಥೆ ಬಗ್ಗೆ ಸಿದ್ದರಾಮಯ್ಯನವರು ಮಾತನಾಡಿದರೆ ಅದಕ್ಕೊಂದು ಅರ್ಥವಿರುತ್ತದೆ ಎಂಬ ಛಾಪು ಮೂಡಿದೆ.

ಹೆಜ್ಜೆ ಗುರುತು : ಗ್ರಾಮೀಣ ಹಿನ್ನೆಲೆ ಹಾಗೂ ಸಾಮಾನ್ಯ ರೈತ ಕುಟುಂಬದಿಂದ ಬಂದಿರುವ ಸಿದ್ದರಾಮಯ್ಯ ಅವರು, ಸುದೀರ್ಘ ಕಾಲದ ರಾಜಕಾರಣದಲ್ಲಿ ಹಣಕಾಸು ಇಲಾಖೆ ನಿರ್ವಹಣೆಯ ಜತೆ ಜತೆಗೇ ಸುಧಾರಣಾ ಕ್ರಮಗಳನ್ನೂ ಕೈಗೊಂಡಿದ್ದಾರೆ. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ ಹಾಗೂ ಮೌಲ್ಯವರ್ಧಿತ ತೆರಿಗೆ ಪದ್ಧತಿ (ವ್ಯಾಟ್) ಜಾರಿಯಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ. ಆರ್ಥಿಕ ಶಿಸ್ತು ಕಾಪಾಡಲು ಒತ್ತು ಕೊಟ್ಟ ಅವರು, ಜನಪ್ರಿಯ ಬಜೆಟ್‌ಗಳ ನಡುವೆಯೂ ಸಮತೋಲನ ಕಾಯ್ದುಕೊಳ್ಳಲು ಕ್ರಮ ವಹಿಸಿರುವುದು ವೈಶಿಷ್ಟ್ಯವಾಗಿದೆ. ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಮಂಡಿಸಿದ ಬಜೆಟ್‌ಗಳಲ್ಲಿ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಮಾನದಂಡಗಳ ಅನುಸಾರವೇ ಸಾಲ ತೆಗೆದುಕೊಂಡಿರುವುದು ಗಮನಾರ್ಹ. ಈ ಸಂಬಂಧ ಅವರ ಬಜೆಟ್ ಪುಸ್ತಕದಲ್ಲೇ ಅತ್ಯಂತ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

ಕನಸಿನ ಮನೆ ನಿಮ್ಮದಾಗಲು ಉತ್ತಮ ಕ್ರೆಡಿಟ್ ಸ್ಕೋರ್ ಪಡೆಯುವುದು ಹೇಗೆಂದು ತಿಳಿಯಿರಿ



ಸ್ವಂತ ಕನಸಿನ ಮನೆ ಹೊಂದುವುದು ಅನೇಕರ ಪ್ರಮುಖ ಆರ್ಥಿಕ ಗುರಿ. ಆದರೂ ನೀವು 'ಗೃಹ' ಎಂದು ಕರೆಸಿಕೊಳ್ಳುವ ಆ ಒಂದು ಜಾಗವನ್ನು ನಿರ್ಮಿಸಲು ವರ್ಷಗಳೇ ಬೇಕಾಗುತ್ತದೆ. ಉಳಿತಾಯದಿಂದ ಸಾಲದವರೆಗೆ, ನಿಮ್ಮ ಮನೆಯ ಕನಸು ಸಾಕಾರಗೊಳ್ಳುವ ಮೊದಲು ನೀವು ಕಾಳಜಿ ವಹಿಸಬೇಕಾದ ಸಾಕಷ್ಟು ಸಂಗತಿಗಳಿವೆ. ನಿಮ್ಮ ಕೈಯಲ್ಲಿರುವ ಉಳಿತಾಯವು ನೀವು ಹೊಂದಿರುವ ಪ್ರಮುಖ ಆರ್ಥಿಕ ಹೂಡಿಕೆಗಳಲ್ಲಿ ಒಂದಾಗಿದ್ದರೂ, ಮನೆಯ ಮಾಲೀಕತ್ವದ ಪಯಣವನ್ನು ಆರಂಭಿಸುವಾಗ ನೀವು ಅಡಮಾನದ ಯಶಸ್ಸಿಗೆ ಉತ್ತಮ ಕ್ರೆಡಿಟ್ ಸ್ಕೋರ್ ಅನ್ನೂ ಖಾತ್ರಿಪಡಿಸಿಕೊಳ್ಳಬೇಕು.

ಉತ್ತಮ ಕ್ರೆಡಿಟ್ ಸ್ಕೋರ್ ನಿಮ್ಮ ಗೃಹ ಸಾಲ ಪಡೆಯುವುದನ್ನು ಸುಲಭವಾಗಿಸುವ ಸಾಧ್ಯತೆಗಳನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಉತ್ತಮ ಬಡ್ಡಿ ದರಗಳು, ಅನುಕೂಲಕರ ಮರುಪಾವತಿ ಅವಧಿಯನ್ನು ಪಡೆಯಲು ಸಹಾಯ ಮಾಡುವ ಮೂಲಕ, ಮನೆ ಮಾಲೀಕರಾಗುವ ಮಹತ್ವಾಕಾಂಕ್ಷೆಯುಳ್ಳವರಿಗೆ ಸುಲಭದ ಮಾರ್ಗವನ್ನು ರೂಪಿಸುತ್ತದೆ. ಉತ್ತಮ ಕ್ರೆಡಿಟ್ ಸ್ಕೋರ್ ಅನ್ನು ರಾತ್ರೋರಾತ್ರಿ ನಿರ್ಮಿಸಲು ಸಾಧ್ಯವಿಲ್ಲ, ಯಶಸ್ಸಿನತ್ತ ಹೆಜ್ಜೆ ಇಡಲು ಪರಿಣಾಮಕಾರಿಯಾದ ತಂತ್ರಗಳು ಮತ್ತು ಹಂತಗಳ ಬಗ್ಗೆ ನೀವು ಗಮನ ಹರಿಸಬೇಕು. ನಂಬಿಕಾರ್ಹ ಕ್ರೆಡಿಟ್ ಸ್ಕೋರ್ ಅನ್ನು ಸಂಪಾದಿಸಲು ಅನುಸರಿಸಬೇಕಾದ ಪ್ರಮುಖ ಹಂತಗಳ ಬಗ್ಗೆ ನೋಡೋಣ.

ಕ್ರೆಡಿಟ್ ಕಾರ್ಡ್‌ಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವುದು

ಕ್ರೆಡಿಟ್ ಕಾರ್ಡ್‌ಗಳು ಕೇವಲ ಅನುಕೂಲಕರ ಪಾವತಿ ವಿಧಾನವಲ್ಲ, ಬದಲಾಗಿ ಇತರ ಇ–ವ್ಯಾಲೆಟ್ ಪಾವತಿ ಆಯ್ಕೆಗಳಿಗಿಂತ ಉತ್ತಮ ಕ್ರೆಡಿಟ್ ಸ್ಕೋರ್ ನಿರ್ವಹಿಸುವಲ್ಲಿಯೂ ನಿರ್ಣಾಯಕ ಪಾತ್ರ ವಹಿಸುತ್ತದೆ. ನಿಮ್ಮ ಕ್ರೆಡಿಟ್ ಕಾರ್ಡ್‌ಗಳ ನಿಯಮಿತ ಹಾಗೂ ಜವಾಬ್ದಾರಿಯುತ ಬಳಕೆ ಧನಾತ್ಮಕ ಕ್ರೆಡಿಟ್

ಉತ್ತಮ ಕ್ರೆಡಿಟ್ ಸ್ಕೋರ್ ಅನ್ನು ನಿರ್ಮಿಸಲು ಸಮಯ ಮತ್ತು ಸ್ಥಿರವಾದ ಜವಾಬ್ದಾರಿಯುತ ಆರ್ಥಿಕ ನಡತೆ ಬೇಕಾಗುತ್ತದೆ. ಹೀಗಾಗಿ, ನೀವು ಅತ್ಯಂತ ತಾಳ್ಮೆಯಿಂದ ಇರಬೇಕು ಮತ್ತು ಉತ್ತಮ ಕ್ರೆಡಿಟ್ ಸ್ಕೋರ್ ಸಾಧಿಸಲು ತಕ್ಷಣದ ಪರಿಹಾರಗಳನ್ನು ಹುಡುಕುವುದನ್ನು ತಪ್ಪಿಸಬೇಕು. ಬದಲಾಗಿ, ನಿಮ್ಮ ಆರ್ಥಿಕ ಗುರಿಯತ್ತ ಗಮನ ಕೇಂದ್ರೀಕರಿಸಿ ಹಾಗೂ ಅದಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಿ. ಇದು ದೀರ್ಘಾವಧಿಯಲ್ಲಿ ನಿಮಗೆ ಪ್ರಯೋಜನವನ್ನು ಕೊಡುತ್ತದೆ.



ಸ್ಕೋರ್ ಹಿನ್ನೆಲೆಯನ್ನು ಸ್ಥಾಪಿಸುವ ಮೂಲಕ ಸಾಲ ಕೊಡುವವರಲ್ಲಿ ನಿಮ್ಮ ಅರ್ಹತೆಯನ್ನು ರುಜುವಾತು ಮಾಡುತ್ತದೆ.

ಸಮಯಕ್ಕೆ ಸರಿಯಾದ ಪಾವತಿಯನ್ನು ಖಚಿತಪಡಿಸಿಕೊಳ್ಳಿ

ನಿಮ್ಮ ಕ್ರೆಡಿಟ್‌ಕಾರ್ಡ್‌ಗಳು ಅಥವಾ ಇತರ ಸಾಲಗಳಲ್ಲಿ ಸರಿಯಾದ ಸಮಯಕ್ಕೆ ಪಾವತಿಗಳನ್ನು ಮಾಡುವುದು ಉತ್ತಮ ಕ್ರೆಡಿಟ್ ಸ್ಕೋರ್ ನಿರ್ಮಿಸುವ ಪ್ರಮುಖ ಹಂತಗಳಲ್ಲಿ ಒಂದಾಗಿದೆ. ತಡವಾದ ಮರುಪಾವತಿಗಳು ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ತೀವ್ರವಾದ ಪರಿಣಾಮ ಬೀರಬಹುದು ಮತ್ತು ವರ್ಷಗಳವರೆಗೆ ನಿಮ್ಮ ಸಾಲದ ವರದಿಯಲ್ಲಿ ಪ್ರತಿಫಲಿಸುತ್ತದೆ. ಹೀಗಾಗಿ, ಧನಾತ್ಮಕ ಕ್ರೆಡಿಟ್ ಸ್ಕೋರ್ ಅನ್ನು ಕಾಪಾಡಿಕೊಳ್ಳಲು ನೀವು ಸಮಯಕ್ಕೆ ಸರಿಯಾಗಿ ಕನಿಷ್ಠ ಬಾಕಿ ಮೊತ್ತವನ್ನು ಪಾವತಿಯನ್ನು ಖಾತ್ರಿಪಡಿಸಿಕೊಳ್ಳಿ. ಮನೆಯ ಒಡೆತನಕ್ಕಾಗಿ ಅಡಮಾನವನ್ನು ಪಡೆದುಕೊಳ್ಳುವಾಗ ಇದು ಸುಲಭವಾದ ದಾರಿಗೆ ಕಾರಣವಾಗುತ್ತದೆ.

ಕಡಿಮೆ ಕ್ರೆಡಿಟ್ ಬಳಕೆ

ಕ್ರೆಡಿಟ್ ಬಳಕೆ ನಿಮ್ಮ ಕ್ರೆಡಿಟ್ ಕಾರ್ಡ್ ಮಿತಿಯಿಂದ ಕ್ರೆಡಿಟ್ ಕಾರ್ಡ್ ಬ್ಯಾಲೆನ್ಸ್‌ಗಳ ಅನುಪಾತವಾಗಿದೆ. ನಿಮ್ಮ ಕ್ರೆಡಿಟ್ ಸ್ಕೋರ್ ಅನ್ನು ಉತ್ತಮವಾಗಿಸಲು ನಿಮ್ಮ ಕ್ರೆಡಿಟ್ ಬಳಕೆಯನ್ನು ಸದಾ 30% ಕ್ಕಿಂತ ಕಡಿಮೆ ಇರಿಸಿಕೊಳ್ಳುವ ಗುರಿಯನ್ನು ಹೊಂದಿರಬೇಕು. ಅಧಿಕ ಕ್ರೆಡಿಟ್ ಬಳಕೆ ಸಾಲ ನೀಡುವವರಿಗೆ ನಿಮ್ಮ ಹಣಕಾಸಿನ ತೊಂದರೆಯನ್ನು ಸೂಚಿಸಬಹುದು, ಇದು ನಿಮ್ಮ ಸಾಲದ ಅರ್ಹತೆ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು.

ಕ್ರೆಡಿಟ್ ಸ್ಕೋರ್ ಅನ್ನು ನಿಯಮಿತವಾಗಿ ಪರಿಶೀಲಿಸಿ

ಕಾಲಕಾಲಕ್ಕೆ ನಿಮ್ಮ ಕ್ರೆಡಿಟ್ ರಿಪೋರ್ಟ್‌ಗಳು, ವಹಿವಾಟು, ಪಾವತಿಗಳು ಇತ್ಯಾದಿಗಳನ್ನು ನಿಯಮಿತವಾಗಿ ಪರಿಶೀಲಿಸುವ ಮೂಲಕ ಧನಾತ್ಮಕ ಕ್ರೆಡಿಟ್ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಎಲ್ಲಾ ದೋಷಗಳು, ತಪ್ಪುಗಳು ಅಥವಾ ವಂಚನೆಯ ಚಟುವಟಿಕೆಗಳಿಗಾಗಿ ಕ್ರೆಡಿಟ್ ರಿಪೋರ್ಟ್‌ಗಳನ್ನು ಪರಿಶೀಲನೆ ನಡೆಸಿ ಮತ್ತು ಯಾವುದೇ ವ್ಯತ್ಯಾಸಗಳಿದ್ದರೆ ತ್ವರಿತವಾಗಿ ಪರಿಹರಿಸಿಕೊಳ್ಳುವ ಗುರಿಯನ್ನು ಹೊಂದಿರಿ.

ನಿಮ್ಮ ಕ್ರೆಡಿಟ್ ಮಿಶ್ರಣವನ್ನು ವೈವಿಧ್ಯಗೊಳಿಸಿ

ಒಂದೇ ಸೂರಿನಡಿ ನಿಮ್ಮ ಕ್ರೆಡಿಟ್ ಖಾತೆಗಳ ವೈವಿಧ್ಯಮಯ ಮಿಶ್ರಣವನ್ನು ಹೊಂದಿರಿ. ಇದರಿಂದ ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ಧನಾತ್ಮಕವಾಗಿ ಪರಿಣಾಮ ಬೀರುವ ಬಹು ಸಂಪನ್ಮೂಲಗಳನ್ನು ನೀವು ಪಡೆಯಬಹುದು. ಕ್ರೆಡಿಟ್‌ಕಾರ್ಡ್‌ಗಳ ಜೊತೆಗೆ ಕಂತುಗಳ ಸಾಲ ಮತ್ತು ಇತರ ಸಾಲದ ಖಾತೆಗಳ ಆರೋಗ್ಯಕರ ಮಿಶ್ರಣವನ್ನು ನಿರ್ವಹಿಸುವುದನ್ನು ಪರಿಗಣಿಸಿ.

ತಾಳ್ಮೆಯಿಂದ ಇರಿ

ಉತ್ತಮ ಕ್ರೆಡಿಟ್ ಸ್ಕೋರ್ ಅನ್ನು ನಿರ್ಮಿಸಲು ಸಮಯ ಮತ್ತು ಸ್ಥಿರವಾದ ಜವಾಬ್ದಾರಿಯುತ ಆರ್ಥಿಕ ನಡತೆ ಬೇಕಾಗುತ್ತದೆ. ಹೀಗಾಗಿ, ನೀವು ಅತ್ಯಂತ ತಾಳ್ಮೆಯಿಂದ ಇರಬೇಕು ಮತ್ತು ಉತ್ತಮ ಕ್ರೆಡಿಟ್ ಸ್ಕೋರ್ ಸಾಧಿಸಲು ತಕ್ಷಣದ ಪರಿಹಾರಗಳನ್ನು ಹುಡುಕುವುದನ್ನು ತಪ್ಪಿಸಬೇಕು. ಬದಲಾಗಿ, ನಿಮ್ಮ ಆರ್ಥಿಕ ಗುರಿಯತ್ತ ಗಮನ ಕೇಂದ್ರೀಕರಿಸಿ ಹಾಗೂ ಅದಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಿ. ಇದು ದೀರ್ಘಾವಧಿಯಲ್ಲಿ ನಿಮಗೆ ಪ್ರಯೋಜನವನ್ನು ಕೊಡುತ್ತದೆ.

ವೃತ್ತಿಪರ ಸಲಹೆಯನ್ನು ಪಡೆಯಿರಿ

ನಿಮ್ಮ ಕ್ರೆಡಿಟ್ ಸ್ಕೋರ್ ಅನ್ನು ನಿಯಂತ್ರಣದಲ್ಲಿಡಲು ನೀವು ಕಷ್ಟಪಡುತ್ತಿದ್ದರೆ, ಪ್ರಮಾಣೀಕೃತ ಕ್ರೆಡಿಟ್ ಸಲಹೆಗಾರರಿಂದ ವೃತ್ತಿಪರ ಸಲಹೆಯನ್ನು ಪಡೆದುಕೊಳ್ಳಿ. ಸದೃಢ ಕ್ರೆಡಿಟ್ ವ್ಯಕ್ತಿತ್ವವನ್ನು ರೂಪಿಸಲು ಅವರು ನಿಮಗೆ ಸರಿಹೊಂದುವ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಬಹುದು.

ಸಮತೋಲಿತ ಕ್ರೆಡಿಟ್ ಸ್ಕೋರ್ ಅನ್ನು ಇರಿಸಿಕೊಳ್ಳುವುದು ನಿಮ್ಮ ಮನೆಯ ಸಾಮರ್ಥ್ಯವನ್ನು ಪ್ರಕಟಿಸುವ ಒಂದು ಮಾರ್ಗವಾಗಿದೆ. ಆದರೆ, ನಿಮ್ಮನ್ನು ಸರಿಯಾದ ದಾರಿಯಲ್ಲಿ ಇರಿಸಲು ಇದು ಮಾತ್ರ ಏಕೈಕ ವಿಷಯವಲ್ಲ. ನಿಮ್ಮ ಕನಸಿನ ಮನೆಯ ಗುರಿಯನ್ನು ಸಾಧಿಸಲು ಕ್ರೆಡಿಟ್ ಕಾರ್ಡ್ ಅಥವಾ ಹೋಮ್‌ಲೋನ್‌ಗಳು ಏಕಮಾತ್ರ ಮಾರ್ಗವಲ್ಲ.

ದಂಡ ಬಡ್ಡಿಯನ್ನು ನಿಷೇಧಿಸಿದ ಆರ್‌ಬಿಐ : ಜನವರಿಯಿಂದ ಜಾರಿ

ಸಮಾನ ಮಾಸಿಕ ಕಂತು (ಇಎಂಐ) ಮೂಲಕ ಸಾಲ ಮರುಪಾವತಿ ಮಾಡುವ ವೈಯಕ್ತಿಕ ಸಾಲಗಾರರಿಗೆ ನಿಗದಿತ (ಫಿಕ್ಸೆಡ್) ಬಡ್ಡಿ ದರ ವ್ಯವಸ್ಥೆ ಅಥವಾ ಸಾಲದ ಅವಧಿ ವಿಸ್ತರಿಸುವ ಆಯ್ಕೆಯನ್ನು ಒದಗಿಸುವಂತೆ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿದೆ. ಬಡ್ಡಿ ದರದ ಏರಿಕೆ ಸಂದರ್ಭದಲ್ಲಿ ಸಾಲಗಾರರು ಋಣಾತ್ಮಕ (ನೆಗೆಟಿವ್) ಅಮಾರ್ಟೈಸೇಶನ್ ಜಾಲಕ್ಕೆ ಬೀಳುವುದನ್ನು ತಪ್ಪಿಸುವುದು ಈ ಕ್ರಮದ ಉದ್ದೇಶವಾಗಿದೆ.

ಮುಂಬೈ : ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಆದಾಯ ವೃದ್ಧಿಗೆ ದಂಡ ಬಡ್ಡಿ (ಪೀನಲ್ ಇಂಟರೆಸ್ಟ್) ಹೇರಿಕೆಯನ್ನು ಒಂದು ಸಾಧನವನ್ನಾಗಿ ಮಾಡಿಕೊಂಡಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದಂಡ ಬಡ್ಡಿಯನ್ನು ನಿಷೇಧಿಸಿದೆ.

ಸಾಲ ಮರುಪಾವತಿಗೆ ವಿಫಲರಾದರೆ ದಂಡ ಬಡ್ಡಿಗೆ ಬದಲಾಗಿ ತರ್ಕಬದ್ಧವಾದ ದಂಡ ಶುಲ್ಕವನ್ನು ಮಾತ್ರ ಹೇರಬಹುದು. ದಂಡ ಬಡ್ಡಿ ಹೇರಿಕೆ ಮೇಲಿನ ನಿಷೇಧ 2024ರ ಜನವರಿ 1ರಿಂದ ಜಾರಿಗೆ ಬರಲಿದೆ ಎಂದು ಆರ್‌ಬಿಐ ಹೊರಡಿಸಿದ ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಿದೆ.

ಸಾಲದ ಒಪ್ಪಂದವನ್ನು ಪಾಲಿಸದ ಸಾಲಗಾರರಿಗೆ ಒಂದು ವೇಳೆ ದಂಡ ವಿಧಿಸಿದರೆ ಅದನ್ನು ದಂಡ ಶುಲ್ಕ ಎಂದು ಪರಿಗಣಿಸಬೇಕು. ಸಾಲದ ಬಡ್ಡಿಗೆ ಸೇರಿಸುವ ದಂಡವನ್ನು ಬಡ್ಡಿ ರೂಪದಲ್ಲಿ ಹೇರಬಾರದು ಎಂದು ಕೇಂದ್ರೀಯ ಬ್ಯಾಂಕ್ ಸ್ಪಷ್ಟ ಸೂಚನೆ ನೀಡಿದೆ.

ಸಾಲ ಮರುಪಾವತಿ ಮಾಡಲು ವಿಫಲರಾದವರಿಗೆ ವಿಧಿಸುವ ದಂಡ ಶುಲ್ಕ ಕೂಡ ತರ್ಕಬದ್ಧವಾಗಿರಬೇಕು. ಇದು ನಿಯಮ ಪಾಲನೆ ವೈಫಲ್ಯದ ಪ್ರಮಾಣ ಆಧರಿಸಿರಬೇಕು. ಯಾವುದೇ ತಾರತಮ್ಯ ಮಾಡಬಾರದು. ದಂಡ ಶುಲ್ಕಗಳ ಮೇಲೆ ಮತ್ತೆ ಬಡ್ಡಿಯನ್ನು ಲೆಕ್ಕ ಹಾಕಬಾರದು ಎಂದೂ ಸೂಚಿಸಿದೆ.

ಯಾವುದಕ್ಕೆ ಅನ್ವಯಿಸದು? : ಈ ಸೂಚನೆಗಳು ಕ್ರೆಡಿಟ್ ಕಾರ್ಡ್‌ಗಳು, ಬಾಹ್ಯವಾಣಿಜ್ಯ ಸಾಲಗಳು, ಟ್ರೇಡ್ ಕ್ರೆಡಿಟ್‌ಗಳಿಗೆ ಅನ್ವಯವಾಗುವುದಿಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ನಿಗದಿತ ದರದ ಆಯ್ಕೆ : ಸಮಾನ ಮಾಸಿಕ ಕಂತು (ಇಎಂಐ) ಮೂಲಕ ಸಾಲ ಮರುಪಾವತಿ ಮಾಡುವ ವೈಯಕ್ತಿಕ ಸಾಲಗಾರರಿಗೆ ನಿಗದಿತ (ಫಿಕ್ಸೆಡ್) ಬಡ್ಡಿ ದರ ವ್ಯವಸ್ಥೆ ಅಥವಾ ಸಾಲದ ಅವಧಿ ವಿಸ್ತರಿಸುವ ಆಯ್ಕೆಯನ್ನು ಒದಗಿಸುವಂತೆ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿದೆ. ಬಡ್ಡಿ ದರದ ಏರಿಕೆ ಸಂದರ್ಭದಲ್ಲಿ ಸಾಲಗಾರರು ಋಣಾತ್ಮಕ (ನೆಗೆಟಿವ್) ಅಮಾರ್ಟೈಸೇಶನ್ ಜಾಲಕ್ಕೆ ಬೀಳುವುದನ್ನು ತಪ್ಪಿಸುವುದು ಈ ಕ್ರಮದ ಉದ್ದೇಶವಾಗಿದೆ.

ರಷ್ಯಾ–ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಹಣದುಬ್ಬರ ನಿಯಂತ್ರಿಸಲು ಕೇಂದ್ರೀಯ ಬ್ಯಾಂಕ್ ರೆಪೋ ದರವನ್ನು ಹೆಚ್ಚಿಸಲು ಆರಂಭಿಸಿದ ನಂತರ 2022ರ ಮೇ ತಿಂಗಳಿಂದ ಬಡ್ಡಿ ದರ ಏರುಮುಖವಾಗಿದೆ.

250 ಮೂಲ ಪಾಯಿಂಟ್ ಏರಿಕೆ : ರೆಪೋ ದರದಲ್ಲಿ 250 ಮೂಲ ಪಾಯಿಂಟ್ ಏರಿಕೆಯ ಫಲವಾಗಿ ಬಹಳಷ್ಟು ಸಾಲಗಾರರು ನೆಗೆಟಿವ್ ಅಮಾರ್ಟೈಸೇಶನ್ ಸ್ಥಿತಿ

ಆರ್‌ಬಿಐ ನ್ಯೂಸ್

ದೇಶದ ಮಧ್ಯಮ ವರ್ಗದ ಜನರ ಆದಾಯ ಕಳೆದ ಹತ್ತು ವರ್ಷಗಳಲ್ಲಿ ಮೂರುಪಟ್ಟು ಹೆಚ್ಚಾಗಿದೆ! 2012-13ರಿಂದ 2022-23ರ ನಡುವೆ ಆದಾಯ 4.4 ಲಕ್ಷ ದಿಂದ 13 ಲಕ್ಷ ರೂಪಾಯಿಗೆ ಏರಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಂಶೋಧನಾ ವರದಿಯೊಂದು ಹೇಳಿದೆ. ಕಡಿಮೆ ಆದಾಯದ ಗುಂಪುಗಳು ಹೆಚ್ಚು ಆದಾಯದ ಗುಂಪಾಗಿ ಪರಿವರ್ತನೆಗೊಂಡಿದ್ದು ಹಾಗೂ ಹಿಂದೆ ಆದಾಯವನ್ನು ದಾಖಲಿಸದಿದ್ದವರು ಈಗ ತೆರಿಗೆ ವಿವರಗಳನ್ನು (ಐಟಿಆರ್) ಸಲ್ಲಿಸುವ ಪ್ರಮಾಣದಲ್ಲೂ ಹೆಚ್ಚಳವಾಗಿದೆ ಎಂದು ಎಸ್‌ಬಿಐ ವರದಿ ಹೇಳಿದೆ.

ಎದುರಿಸಿದ್ದರು. ಇಎಂಐ, ನಿಗದಿತ ಬಡ್ಡಿಗಿಂತ ಕಡಿಮೆಯಾಗಿದ್ದರಿಂದ ಅಸಲು ಮೊತ್ತದಲ್ಲಿ ಸತತ ಏರಿಕೆಯಾಗಿತ್ತು. ಇಎಂಐ-ಆಧಾರಿತ ಫ್ಲೋಟಿಂಗ್ ದರದ ವೈಯಕ್ತಿಕ ಸಾಲಗಳನ್ನು ಮಂಜೂರು ಮಾಡುವ ವೇಳೆ ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳು ಸಾಲಗಾರರ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸಬೇಕು ಎಂದು ಆರ್‌ಬಿಐ ಹೇಳಿದೆ. ಗೃಹ, ಆಟೋ ಮತ್ತಿತರ ವೈಯಕ್ತಿಕ ಸಾಲಗಳು ರೆಪೋ ದರದಂತೆ ಬಾಹ್ಯ ಬೆಂಚ್‌ವಾರ್ಕ್ ದರಗಳಿಗೆ ಲಿಂಕ್ ಆಗಿರುತ್ತವೆ.

ಮಧ್ಯಮ ವರ್ಗದ ಆದಾಯ 10 ವರ್ಷದಲ್ಲಿ 3 ಪಟ್ಟು ಏರಿಕೆ

ದೇಶದ ಮಧ್ಯಮ ವರ್ಗದ ಜನರ ಆದಾಯ ಕಳೆದ ಹತ್ತು ವರ್ಷಗಳಲ್ಲಿ ಮೂರುಪಟ್ಟು ಹೆಚ್ಚಾಗಿದೆ! 2012-13ರಿಂದ 2022-23ರ ನಡುವೆ ಆದಾಯ 4.4 ಲಕ್ಷ ದಿಂದ 13 ಲಕ್ಷ ರೂಪಾಯಿಗೆ ಏರಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಂಶೋಧನಾ ವರದಿಯೊಂದು ಹೇಳಿದೆ. ಕಡಿಮೆ ಆದಾಯದ ಗುಂಪುಗಳು ಹೆಚ್ಚು ಆದಾಯದ ಗುಂಪಾಗಿ ಪರಿವರ್ತನೆಗೊಂಡಿದ್ದು ಹಾಗೂ ಹಿಂದೆ ಆದಾಯವನ್ನು ದಾಖಲಿಸದಿದ್ದವರು ಈಗ ತೆರಿಗೆ ವಿವರಗಳನ್ನು (ಐಟಿಆರ್) ಸಲ್ಲಿಸುವ ಪ್ರಮಾಣದಲ್ಲೂ ಹೆಚ್ಚಳವಾಗಿದೆ ಎಂದು ಎಸ್‌ಬಿಐ ವರದಿ ಹೇಳಿದೆ.

2011-12ರಲ್ಲಿ ತೆರಿಗೆ ವಿವರ ಸಲ್ಲಿಸಿದ 1.6 ಕೋಟಿ ವ್ಯಕ್ತಿಗಳ ಪೈಕಿ 5 ಲಕ್ಷ ಆದಾಯ ಹೊಂದಿರುವವರ ಪ್ರಮಾಣ ಶೇ.84 ಆಗಿತ್ತು. ಆದರೆ, 2022-23ರಲ್ಲಿ ತೆರಿಗೆ ವಿವರ ಸಲ್ಲಿಸಿದ ಸಂಖ್ಯೆ 6.85 ಕೋಟಿ ಆಗಿದ್ದು, ಈ ಪೈಕಿ ಶೇ.64 ಜನರು ಮಾತ್ರ 5 ಲಕ್ಷ ರೂ. ಆದಾಯದ ಗುಂಪಿನಲ್ಲಿದ್ದಾರೆ. ಶೇ.8.1ರಷ್ಟು ಜನರು 5-10 ಲಕ್ಷ ರೂ. ಆದಾಯದ ಗುಂಪಿನಲ್ಲಿದ್ದರೆ, ಶೇ.3.8 ಜನರು 10-20 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಶೇ.15ರಷ್ಟು ಜನರು 20-50 ಲಕ್ಷ ರೂ. ಗಳಿಕೆ ಹೊಂದಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತದ ತಲಾ ಆದಾಯ ಪ್ರಸ್ತುತ 2 ಲಕ್ಷ ರೂ.ಗಳಿಂದ 2047ರ ವೇಳೆಗೆ 14.9 ಲಕ್ಷ ರೂಪಾಯಿಗೆ ಏರಲಿದೆ ಎಂದು ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯಲ್ಲಿ ಎಸ್‌ಬಿಐ ಅಂದಾಜು ಮಾಡಿದೆ.

ಬ್ಯಾಂಕುಗಳಿಂದ ಕಳೆದ 5 ವರ್ಷಗಳಲ್ಲಿ ಉದ್ಯಮಿಗಳ ಒಟ್ಟು ರೂ.10.57 ಲಕ್ಷ ಕೋಟಿ ಸಾಲ ಮನ್ನಾ : ಆರ್‌ಬಿಐ

▸▸ ಜಿ.ಆರ್. ವಿದ್ಯಾರಣ್ಯ

2022-23ರ ಸಾಲಿನ ಆರ್ಥಿಕ ವರ್ಷದಲ್ಲಿ ಬ್ಯಾಂಕುಗಳು 2.09 ಲಕ್ಷ ಕೋಟಿ ರೂ ರೈಟ್ ಆಫ್ ಮಾಡಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ. ಈ ರೀತಿಯಾಗಿ ಕಳೆದ 5 ವರ್ಷಗಳಲ್ಲಿ ಒಟ್ಟು 10.57 ಲಕ್ಷ ಕೋಟಿ ಸಾಲ ಮನ್ನಾ ಆಗಿದೆ ಎಂದು ತಿಳಿದುಬಂದಿದೆ.

ಇಂಡಿಯನ್ ಎಕ್ಸ್‌ಪ್ರೆಸ್ ಸಲ್ಲಿಸಿದ ಮಾಹಿತಿ ಹಕ್ಕು ಅರ್ಜಿಗೆ ಉತ್ತರ ನೀಡಿರುವ ಆರ್‌ಬಿಐ ಕಳೆದೊಂದು ವರ್ಷದಲ್ಲಿ 2,09,144 ಕೋಟಿ ರೂಗಳನ್ನು ಬ್ಯಾಂಕಿನ ಸಾಲದ ಪುಸ್ತಕದಿಂದ ಹೊಡೆದು ಹಾಕಲಾಗಿದೆ. 2021-22ರಲ್ಲಿ 1,74,966 ಕೋಟಿ ರೂ. ಮತ್ತು 2020-21ರ ವರ್ಷದಲ್ಲಿ 2,02,781 ಕೋಟಿ ರೂಗಳನ್ನು ಇದೇ ರೀತಿ ಹೊಡೆದು ಹಾಕಲಾಗಿದೆ ಎಂದು ಮಾಹಿತಿ ನೀಡಿದೆ.

ಒಟ್ಟಾರೆಯಾಗಿ ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ಬ್ಯಾಂಕುಗಳು 15,31,453 ಕೋಟಿ ರೂಗಳನ್ನು ಮನ್ನಾ ಮಾಡಿವೆ ಎಂದು ಆರ್‌ಬಿಐ ಹೇಳಿದೆ. ಬಹುತೇಕ ಉದ್ಯಮಿಗಳ ಸಾಲವೇ ಮನ್ನಾ ಆಗಿದೆ ಎನ್ನಲಾಗಿದೆ. ಆದರೆ ಅವರ ಹೆಸರುಗಳನ್ನು ಬಹಿರಂಗಪಡಿಸಲು ಆರ್‌ಬಿಐ ನಿರಾಕರಿಸಿದೆ. ಈ ಹೊಡೆದು ಹಾಕುವ (ರೈಟ್ ಆಫ್) ವಿಧಿಯನ್ನು ಭಾರತೀಯ ರಿಝರ್ವ್ ಬ್ಯಾಂಕಿನ ಮಾಜಿ ಡೆಪ್ಯೂಟಿ ಗವರ್ನರ್ ಕೆ.ಸಿ.ಚಕ್ರಬರ್ತಿಯವರು ದೊಡ್ಡ ಹಗರಣ ಎಂದು ಕರೆಯುತ್ತಾರೆ.

ರೈಟ್ ಆಫ್ ಎಂದರೇನು?

ಸಾಲ ಮನ್ನಾ ಎಂದ ಕೂಡಲೇ ಅದು ಏನೆಂದು ಎಲ್ಲರಿಗೂ ತಿಳಿಯುತ್ತದೆ. ಆದರೆ ಈ ರೈಟ್-ಆಫ್ ಅಂದರೆ ಸಾಲ ಮನ್ನಾ ಅಷ್ಟೇ ಅಲ್ಲ ಎಂಬುದು

ಬಹಳಷ್ಟು ಜನರಿಗೆ ತಿಳಿದಿರುವುದಿಲ್ಲ. ಯಾವುದೇ ಬ್ಯಾಂಕ್ ತನ್ನ ಸಾಲವನ್ನು ಮನ್ನಾ ಮಾಡಲು ಇಷ್ಟ ಪಡುವುದಿಲ್ಲ, ಏಕೆಂದರೆ ಜನರಿಗೆ/ಉದ್ದಿಮೆಗಳಿಗೆ ನೀಡಿರುವ ಸಾಲ ಬ್ಯಾಂಕಿನ ಆಸ್ತಿ ಯಾಗಿರುತ್ತದೆ.

ಉದಾಹರಣೆಗೆ ನೀವು ಬ್ಯಾಂಕಿನಿಂದ ಒಂದು ಲಕ್ಷ ರೂ. ಸಾಲ ಪಡೆದಿದ್ದೀರಿ ಎಂದುಕೊಳ್ಳೋಣ. ಬ್ಯಾಂಕಿನ ದೃಷ್ಟಿಯಲ್ಲಿ ನೀವು ತೆಗೆದುಕೊಂಡಿರುವ ಸಾಲ ಬ್ಯಾಂಕಿಗೆ ಆಸ್ತಿ ಮತ್ತು ಅದಕ್ಕೆ ನೀವು ಕಟ್ಟುವ ಬಡ್ಡಿ ಹಣ ಬ್ಯಾಂಕಿಗೆ ಆದಾಯ ಆಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಖಾತೆ ಸಾಮಾನ್ಯ ಮತ್ತು ನಿಮಗೆ ನೀಡಿರುವ ಹಣ ಬ್ಯಾಂಕಿನ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ಆದರೆ ನೀವು ಬಡ್ಡಿ ಕಟ್ಟುವುದನ್ನು ನಿಲ್ಲಿಸಿದ ನಂತರ ಅಂದರೆ ಬ್ಯಾಂಕಿಗೆ ಆದಾಯ ನಿಂತ ದಿನದಿಂದ ನಿಮ್ಮ ಸಾಲವನ್ನು ನಿಷ್ಕ್ರಿಯ ಆಸ್ತಿ ಅಥವಾ ವಸೂಲಾಗದ ಸಾಲ (ನಾನ್-ಪರ್ಫಾರ್ಮಿಂಗ್ ಅಸೆಟ್) ಎಂದು ಮತ್ತು ನಿಮ್ಮಿಂದ ಬರಬೇಕಾಗಿದ್ದ ಬಡ್ಡಿ ಹಣವನ್ನು ಖರ್ಚು ಎಂದು ಪರಿಗಣಿಸಲಾಗುತ್ತದೆ.

ಆರ್.ಬಿ.ಐ. ನಿಯಮಾವಳಿ ಅನುಸಾರ ಒಂದು ಸಮಯ/ಹಂತದ ನಂತರ ಇದನ್ನು ಆಸ್ತಿ ಎಂದು ಪರಿಗಣಿಸಲು ಆಗುವುದಿಲ್ಲ, ಅದಕ್ಕಾಗಿ ಅದನ್ನು ಬ್ಯಾಂಕಿನ ಲೆಕ್ಕ-ಪತ್ರದಲ್ಲಿ ಆಸ್ತಿ ಪಟ್ಟಿಯಿಂದ ಹೊಡೆದು ಹಾಕಲಾಗುತ್ತದೆ. ಇದನ್ನು ರೈಟ್-ಆಫ್ ಎಂದು ಕರೆಯುತ್ತಾರೆ. ರೈಟ್-ಆಫ್ ಎಂದ ಕೂಡಲೇ ಬ್ಯಾಂಕು ಈ ಸಾಲವನ್ನು ಕೈ ಬಿಟ್ಟಿದೆ ಎಂಬ ಅರ್ಥವಲ್ಲ. ಕಾನೂನಿನ ಪ್ರಕಾರ ಸಾಲಗಾರರ ವಿರುದ್ಧ ಸಾಲ ಮತ್ತು ಬಡ್ಡಿಯ ವಸೂಲಿಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಅಧಿಕಾರವಿರುತ್ತದೆ. ಕೆಲವು ಬ್ಯಾಂಕುಗಳು ಈ ಹೊಡೆದು ಹಾಕಿದ ಸಾಲವನ್ನು ವಸೂಲಿಗಾಗಿ ವಸೂಲಿ ಕಂಪನಿಗಳಿಗೆ ಮಾರಲೂಬಹುದು. ಅಂತಹ ಸಂದರ್ಭದಲ್ಲಿ ವಸೂಲಿ ಕಂಪನಿಯ ದಾಂಢಿಗರು ನಿಮ್ಮ ಮನೆ ಬಾಗಿಲಿಗೆ ಬಂದು ಕದ ತಟ್ಟಬಹುದು. ನೀವು ಸಾಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇವಷ್ಟು ಪುಸ್ತಕದ ಬದನೇಕಾಯಿ.

ಇದರಲ್ಲಿ ಬ್ಯಾಂಕಿಗೆ ಆಗುವ ನಷ್ಟ–ಲಾಭವೇನು ನೋಡೋಣ. ಸಾಲರೂಪದಲ್ಲಿ ನೀಡಿರುವ ಹಣ ಸಂಪೂರ್ಣವಾಗಿ ಹಿಂದಕ್ಕೆ ಬಂದೇ ಬರುವುದೆಂಬ ನಂಬಿಕೆ ಯಾವ ಬ್ಯಾಂಕಿಗೂ ಇರುವುದಿಲ್ಲ ಹಾಗಾಗಿ ಸಾಲದ ಮೊತ್ತದ ಒಂದು ಅಂಶವನ್ನು ಅದು ತನ್ನ ಖರ್ಚೆಂದು ಲೆಕ್ಕದ ಪುಸ್ತಕದಲ್ಲಿ ಮೊದಲೇ ತೋರಿಸುತ್ತದೆ. ಇದು ಒಟ್ಟು ಸಾಲದ 5% ಆಗಿರಬಹುದು ಅಥವಾ ಸಾಲದ ಗುಣಮಟ್ಟದ ಆಧಾರದ ಮೇಲೆ ಇನ್ನೂ ಹೆಚ್ಚಾಗಿರಬಹುದು. ನಿಷ್ಕ್ರಿಯ ಸಾಲವನ್ನು ಆಸ್ತಿ ಪಟ್ಟಿಯಿಂದ ಹೊಡೆದು ಹಾಕಿದ ನಂತರ ಬ್ಯಾಂಕಿಗೆ ಖರ್ಚು ಹೆಚ್ಚಾಗಿ ಅದರ ವಾರ್ಷಿಕ ಲಾಭ ಕಡಿಮೆ ಆಗುತ್ತದೆ. ಅಂದರೆ ಆದಾಯ ತೆರಿಗೆಯಲ್ಲಿ ಬ್ಯಾಂಕುಗಳಿಗೆ ವಿನಾಯಿತಿ ದೊರೆಯುತ್ತದೆ. ಇದರಿಂದ ಬ್ಯಾಂಕಿನ ಲೆಕ್ಕ–ಪತ್ರ ಸ್ವಲ್ಪ ಮಟ್ಟಿಗೆ ಸ್ವಚ್ಛವಾಗುತ್ತದೆ. ಆದರೆ ಇದರಿಂದ ಸರಕಾರಕ್ಕೆ ಆದಾಯ ಕಡಿಮೆ (ತೆರಿಗೆ ಖೋತಾ) ಆಗುತ್ತದೆ. ಈ ನಿಷ್ಪ್ರಯೋಜಕ ಆಸ್ತಿಗಳನ್ನು ಕೈ ಬಿಟ್ಟ ನಂತರ ಬ್ಯಾಂಕ್ ಮತ್ತೆ ಬೇರೆಯವರಿಗೆ ಸಾಲ ನೀಡಲು ಸಾಧ್ಯವಾಗುತ್ತದೆ. ಸಾಲ ನೀಡಲು ಬ್ಯಾಂಕಿನ ಬಳಿ ಹಣ ಇಲ್ಲದೆ ಇದ್ದಾಗ ಸರಕಾರ ಅವುಗಳಿಗೆ ರಿ–ಫೈನಾನ್ಸಿಂಗ್ ಮಾಡುತ್ತದೆ. ಅಂದರೆ ಸರಕಾರವೂ ಸಹ ಇಂತಹ ರೈಟ್–ಆಫ್ ಗೆ ಬೆಂಬಲ ನೀಡುತ್ತವೆ ಎಂದರ್ಥ.

ಟೆಕ್ನಿಕಲ್ ರೈಟ್–ಆಫ್ ಎಂದರೇನು?

ಇತ್ತೀಚೆಗೆ ಬ್ಯಾಂಕಿನವರು ಹೊಸ ಟೆಕ್ನಿಕಲ್ ರೈಟ್–ಆಫ್ ಎಂಬ ಪದ ಉಪಯೋಗಿಸಿ ಜನ ಸಾಮಾನ್ಯರನ್ನು ದಾರಿ ತಪ್ಪಿಸುತ್ತಿವೆ. ಇದನ್ನು ಮಾಜಿ ಡೆಪ್ಯೂಟಿ ಗವರ್ನರ್ ಕೆ.ಸಿ.ಚಕ್ರಬರ್ತಿಯವರು ದೊಡ್ಡ ಹಗರಣ ಎಂದು ಕರೆಯುತ್ತಾರೆ. ಇದರಲ್ಲಿ ಯಾವುದೇ ಟೆಕ್ನಿಕಲ್ ಪ್ರಶ್ನೆ ಇಲ್ಲ. ಸಾಲ ತೆಗೆದುಕೊಂಡಿರುವ ಉದ್ದಿಮೆಗಳ ನಿವ್ವಳ ಆದಾಯ ಬ್ಯಾಂಕಿಗೆ ಬರಬೇಕಾಗಿರುವ ಬಡ್ಡಿಯಷ್ಟೂ ಇಲ್ಲದಿರುವುದು ಅವರ ಲೆಕ್ಕ–ಪತ್ರದಲ್ಲಿ ಸ್ಪಷ್ಟವಾಗಿರುವಾಗ ಸಾಲ ತೆಗೆದುಕೊಂಡಿರುವುದು ಮೋಸದ ಉದ್ದೇಶ. ರೈಟ್–ಆಫ್ ಎನ್ನುವುದು ಬ್ಯಾಂಕಿಂಗ್ ಕ್ಷೇತ್ರದ ಸರ್ವೇ ಸಾಮಾನ್ಯ ಪ್ರಕ್ರಿಯೆ ಅದನ್ನು ಮೀರಿ ನಡೆದಿರುವ ಎಲ್ಲಾ ಟೆಕ್ನಿಕಲ್ ರೈಟ್–ಆಫ್‌ಗಳೂ ಕೇವಲ ಹಗರಣ ಎಂಬುದು ಅವರ ಅನಿಸಿಕೆ. ಹಾಗಾದರೆ ಈ ಹೊಡೆದು ಹಾಕಿದ ಮೊತ್ತ ಬ್ಯಾಂಕಿಗೆ ಮತ್ತೆ ಬರುತ್ತದೆಯೇ? ವಿಷಯ ಪರಿಣಿತರಲ್ಲಿ ಇದರ ಬಗ್ಗೆ ಏಕಾಭಿಪ್ರಾಯ ಇಲ್ಲ. ಕೆಲವರು ಕೇವಲ 20% ಮಾತ್ರ ಬರುತ್ತದೆ. ಅದೂ ಸಹ ಹತ್ತಾರು ವರ್ಷಗಳ ನ್ಯಾಯಾಲಯದ ಹೋರಾಟದ ನಂತರ, ಎಂದರೆ ಕೆಲವರು ಸುಮಾರು ಅರ್ಧದಷ್ಟು ಬರುತ್ತದೆ ಎನ್ನುತ್ತಾರೆ. ಏನೇ ಆಗಲಿ ದೊಡ್ಡವರ ದೊಡ್ಡ ಮೊತ್ತದ ಸಾಲ ದೊಡ್ಡ ಹಗರಣವೇ ಸರಿ. ಇದರಲ್ಲಿ ಎಲ್ಲರೂ ಸಹಭಾಗಿ. ಕೊನೆಗೆ ಸರಕಾರಿ ಬ್ಯಾಂಕಿನ ಹಣ ನಮ್ಮ ನಿಮ್ಮ ತೆರಿಗೆಯಿಂದಲೇ ಬರಬೇಕು. ಆದ್ದರಿಂದ ಈಗ ಸರಕಾರ ಹೊಡೆದು ಹಾಕಿರುವ ರೂ.15,31,453 ಕೋಟಿ ರೂ ಸರಿಯೋ ತಪ್ಪೋ ನೀವೇ ಮತ್ತೊಮ್ಮೆ ಯೋಚಿಸಿ.

ಬ್ಯಾಂಕುಗಳಲ್ಲಿದೆ ಸಾವಿರಾರು ಕೋಟಿ ರೂಪಾಯಿ ವಾರಸುದಾರರಿಲ್ಲದ ಹಣ

ಬೈಂದೂರು ಚಂದ್ರಶೇಖರ ನಾವಡ

ಸಾರ್ವಜನಿಕ ರಂಗದ ಬ್ಯಾಂಕ್‌ಗಳಲ್ಲಿ ದಶಕಗಳಿಂದ ವಾರಸುದಾರರಿಲ್ಲದ ಲಕ್ಷಾಂತರ ಗ್ರಾಹಕರ ಉಳಿತಾಯ ಮತ್ತು ಸಾವಧಿ ಠೇವಣಿ ಖಾತೆಗಳಲ್ಲಿ ದೊಡ್ಡ ಪ್ರಮಾಣದ ಅನ್‌ಕ್ಲೇಮ್‌ಡ್ ಹಣ ಕೇಳುವವರಿಲ್ಲದೇ ಉಳಿದುಕೊಂಡಿದೆ.

2023ರ ಫೆಬ್ರವರಿಯವರೆಗೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಹತ್ತು ವರ್ಷಕ್ಕೂ ಅಧಿಕ ಸಮಯದಿಂದ ಕೇಳುವವರಿಲ್ಲದ ಖಾತೆಗಳಲ್ಲಿರುವ ಸುಮಾರು 35,012 ಕೋ. ರೂ. ಅನ್‌ಕ್ಲೇಮ್‌ಡ್ ಹಣವನ್ನು ರಿಸರ್ವ್ ಬ್ಯಾಂಕ್‌ಗೆ ವರ್ಗಾಯಿಸಿವೆ. 2022ರಲ್ಲಿ ಬ್ಯಾಂಕ್‌ಗಳು ಹೀಗೆ ತಮ್ಮ ಬಳಿ ಇರುವ 48,262 ಕೋ. ರೂ. ಧನರಾಶಿಯನ್ನು ಆರ್‌ಬಿಐಗೆ ವರ್ಗಾಯಿಸಿದ್ದವು. ಎಲ್ಲ ಬ್ಯಾಂಕ್‌ಗಳಲ್ಲಿರುವ ಇಂತಹ ಅನ್‌ಕ್ಲೇಮ್‌ಡ್ ಖಾತೆಗಳ ವಾರಸುದಾರರನ್ನು ಹುಡುಕಿ ಇತ್ಯರ್ಥಗೊಳಿಸಲು ಪ್ರಸ್ತುತ ವರ್ಷ ಜೂನ್ ಒಂದರಿಂದ ನೂರು ದಿನಗಳ ವಿಶೇಷ ಅಭಿಯಾನ ನಡೆಸುವಂತೆ ಆರ್‌ಬಿಐ ಸೂಚಿಸಿದೆ.

ಅನ್‌ಕ್ಲೇಮ್‌ಡ್ ಠೇವಣಿ ಎಂದರೇನು?

ವಿವಿಧ ಬ್ಯಾಂಕ್‌ಗಳ ಬಳಿ ಇರುವ ಅನ್‌ಕ್ಲೇಮ್‌ಡ್ ಹಣವನ್ನು ಆರ್‌ಬಿಐಗೆ ವರ್ಗಾಯಿಸಲಾಗುವ ಸುದ್ದಿಯೊಂದು ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟವಾಯಿತು. ಕಾರಣಾಂತರದಿಂದ ಒಂದೆರಡು ವರ್ಷಗಳಿಂದ ಬ್ಯಾಂಕ್ ಶಾಖೆಗೆ ಬರಲಾಗದ, ಖಾತೆಯಲ್ಲಿ ವ್ಯವಹಾರ ನಡೆಸಲಾಗದ ಅನೇಕ ಗ್ರಾಹಕರು ಎಲ್ಲಿ ತಮ್ಮ ಹಣ ರಿಸರ್ವ್ ಬ್ಯಾಂಕ್‌ಗೆ ವರ್ಗಾಯಿಸಲ್ಪಡುತ್ತದೋ ಎಂದು ಗಾಬರಿಗೊಂಡು ಬ್ಯಾಂಕ್ ಶಾಖೆಗಳತ್ತ ಧಾವಿಸಿದರು. ಜನಸಾಮಾನ್ಯರು

ಇಲ್ಲಿ ಗಮನಿಸ ಬೇಕಾದದ್ದೇನೆಂದರೆ ಆರ್‌ಬಿಐ ನಿಯಮಗಳ ಪ್ರಕಾರ ಕೇವಲ ಹತ್ತು ವರ್ಷಕ್ಕೂ ಅಧಿಕ ಸಮಯದಿಂದ ವ್ಯವಹಾರ ನಡೆಯದ ಉಳಿತಾಯ, ಚಾಲ್ತಿ ಖಾತೆ ಮತ್ತು ಸಾವಧಿ ಠೇವಣಿ ಖಾತೆಗಳ ಹಣವನ್ನು ಮಾತ್ರ ಅನ್‌ಕ್ಲೇಮ್‌ಡ್ ಠೇವಣಿ ಎಂದು ವರ್ಗೀಕರಿಸಲಾಗುತ್ತದೆ. ಹೀಗೆ ವಿವಿಧ ಬ್ಯಾಂಕ್‌ಗಳ ಬಳಿ ಇರುವ ಹಣ ರಿಸರ್ವ್ ಬ್ಯಾಂಕ್ ಬಳಿ ಇರುವ ಡಿಪಾಸಿಟರ್ ಎಜುಕೇಶನ್ ಆ್ಯಂಡ್ ಅವಾರ್‌ನೆಸ್ ಫಂಡ್ (ಡಿಇಎ)ಗೆ ವರ್ಗಾಯಿಸಲಾಗುತ್ತದೆ.

ಅನ್‌ಕ್ಲೇಮ್‌ಡ್ ಆಗಲು ಕಾರಣವೇನು?

ಅನ್‌ಕ್ಲೇಮ್‌ಡ್ ಠೇವಣಿ ಹೆಚ್ಚುತ್ತಿರುವುದಕ್ಕೆ ಮುಖ್ಯ ಕಾರಣ ಖಾತೆಗೆ ನಾಮಿನೇಶನ್ ಮಾಡದೇ ಇರುವುದು. ಖಾತೆದಾರನ ಮರಣಾನಂತರ ಯಾರೂ ಅದನ್ನು ಪಡೆಯಲು ಬಾರದೇ ಇರುವುದು. ನಾಮಿನೇಶನ್ ಇಲ್ಲದೇ ಮರಣಿಸಿದ ಗ್ರಾಹಕರ ಖಾತೆಯಲ್ಲಿರುವ ಹಣವನ್ನು ನಿಜವಾದ ಉತ್ತರಾಧಿಕಾರಿಗೆ ನೀಡಲು ಬ್ಯಾಂಕ್‌ಗಳು ಕಾನೂನು ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ಕೆಲವೊಮ್ಮೆ ದಾವೆದಾರರ ಸಂಖ್ಯೆ ಅಧಿಕವಾಗಿದ್ದರೆ ಮತ್ತು ಅವರೊಳಗೆ ಏಕಾಭಿಪ್ರಾಯ ಇಲ್ಲದಿದ್ದರೆ ಅದು ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇರುತ್ತದೆ. ಖಾತೆ ತೆರೆಯುವಾಗ ಗ್ರಾಹಕರು ತಪ್ಪದೇ ನಾಮಿನಿಯ ಹೆಸರನ್ನು ನಮೂದಿಸಬೇಕು. ನಾಮಿನಿಯ ನೇಮಕ ಅಥವಾ ಬದಲಾವಣೆಯನ್ನು ಅನಂತರದಲ್ಲೂ ಮಾಡಬಹುದಾಗಿರುತ್ತದೆ. ಉದಾಹರಣೆಗೆ ಮದುವೆಗೆ ಮೊದಲು ತಂದೆ – ತಾಯಿಯನ್ನು ನಾಮಿನಿಯಾಗಿಸಿದ್ದರೆ ಮದುವೆ ಅನಂತರ ಅದರಲ್ಲಿ ಬದಲಾವಣೆ ಮಾಡಿ ಪತ್ನಿಯನ್ನು ನಾಮಿನಿಯಾಗಿ

ಎಲ್ಲ ಉಳಿತಾಯ, ಚಾಲ್ತಿ ಖಾತೆ ಹಾಗೂ ಸಾವಧಿ ಠೇವಣಿಗಳಿಗೆ ನಾಮಿನಿ ಇಲ್ಲದಿದ್ದರೆ ಸೇರಿಸಿ. ಹಣಕಾಸು ವಹಿವಾಟಿನ ವಿವರ ಕುಟುಂಬಸ್ಥರೊಂದಿಗೆ ಹಂಚಿ ಕೊಳ್ಳುವುದು ಉತ್ತಮ. ಇದರಿಂದ ಸರಿಯಾದ ಸಂದರ್ಭದಲ್ಲಿ ಅವರಿಗೆ ಬ್ಯಾಂಕ್ ಸಂಪರ್ಕಿಸುವುದು ಸುಲಭವಾಗುತ್ತದೆ. ಬ್ಯಾಂಕ್‌ನಿಂದ ಬರುವ ಮೆಸೇಜ್‌ಗಳ ಮೇಲೆ ನಿಗಾ ಇರಲಿ. ನಿಯಮಿತವಾಗಿ ಬ್ಯಾಂಕ್ ಖಾತೆಗೆ ಕೆವೈಸಿ ಸಲ್ಲಿಸಿ. ಅಗತ್ಯ ಇಲ್ಲದ ಖಾತೆಗಳನ್ನು ರದ್ದುಗೊಳಿಸಿ ಒಂದೆರಡು ಅಗತ್ಯದ ಖಾತೆಗಳನ್ನಷ್ಟೇ ಇಟ್ಟುಕೊಳ್ಳುವುದು ಉತ್ತಮ. ಬ್ಯಾಂಕಿನಿಂದ ನೀಡಲ್ಪಟ್ಟ ಫಿಕ್ಸೆಡ್ ಡಿಪಾಸಿಟ್ ಸರ್ಟಿಫಿಕೆಟ್‌ಗಳನ್ನು ಸುರಕ್ಷಿತವಾಗಿ ಇರಿಸಿಕೊಳ್ಳಿ.

ಮಾಡಬಹುದು. ನಾಮಿನಿ ನೇಮಕವಾಗಿದ್ದರೆ ಖಾತೆದಾರನ ಮರಣಾ ನಂತರ ನಾಮಿನಿಯ ಕ್ಲೇಮ್ ಸುಲಭದಲ್ಲಿ ಅಂಗೀಕಾರವಾಗುತ್ತದೆ.

ನಾಮಿನಿಯ ಅಗತ್ಯದ ಅರಿವು

ಜನಸಾಮಾನ್ಯರಲ್ಲಿ ಬ್ಯಾಂಕ್ ಖಾತೆಗಳಿಗೆ ನಾಮಿನೇಶನ್ ಮಾಡಬೇಕಾದ ಅಗತ್ಯದ ಸ್ಪಷ್ಟ ಅರಿವು ಇಲ್ಲ. ಎಷ್ಟೋ ಬಾರಿ ಬ್ಯಾಂಕ್ ಸಿಬ್ಬಂದಿ ನಿಮ್ಮ ಅನಂತರ ಯಾರಿಗೆ ಸಿಗಬೇಕು ಎಂದು ಕೇಳಿದಾಗ ತಾನು ಸತ್ತ ಅನಂತರ ಏನಾದರೇನು ಎಂದೋ ಅಥವಾ ನೀವು ಬ್ಯಾಂಕಿನವರು ಯಾವಾಗಲೂ ಸಾವಿನ ವಿಷಯವೇ ಮಾತನಾಡ್ತೀರಿ ಎಂದೋ ನಕಾರಾತ್ಮಕವಾಗಿ ಮಾತನಾಡುವುದನ್ನು ಕಾಣುತ್ತೇವೆ. ತಮ್ಮ ಅನಂತರ ತಮ್ಮ ಪ್ರೀತಿಪಾತ್ರರ ಬದುಕಿಗೆ ಅಗತ್ಯದ ಹಣ ಸುಲಭವಾಗಿ ದೊರೆಯಬೇಕಾದರೆ ಖಾತೆಗೆ ನಾಮಿನಿ ಸೇರಿಸಬೇಕು ಎನ್ನುವ ಅರಿವು ಮೂಡಿಸುವ ಅಗತ್ಯವಿದೆ.

ಅನ್‌ಕ್ಲೇಮ್‌ಡ್ ಠೇವಣಿ ಕ್ಲೇಮ್ ಹೇಗೆ?

ಎಲ್ಲ ಬ್ಯಾಂಕ್‌ಗಳು ತಮ್ಮ ತಮ್ಮ ವೆಬ್‌ಸೈಟ್‌ನಲ್ಲಿ ತಮ್ಮಲ್ಲಿರುವ ಅನ್‌ಕ್ಲೇಮ್‌ಡ್ ಖಾತೆಗಳ ವಿವರ ನೀಡುತ್ತವೆ. ಅವುಗಳನ್ನು ಆಧರಿಸಿ ಗ್ರಾಹಕರು ಶಾಖೆಗಳನ್ನು ಸಂಪರ್ಕಿಸಿ ನಿಗದಿತ ಕ್ಲೇಮ್ ಫಾರ್ಮ್ ತುಂಬಿಸಿ ಕೆವೈಸಿ ಕೊಟ್ಟು ತಮ್ಮವರ ಹಣವನ್ನು ಪಡೆಯಬಹುದು. ಖಾತೆದಾರರು ಮರಣಿಸಿದ್ದಲ್ಲಿ,



ಸಂಬಂಧಿತ ನಾಮಿನಿ ಬ್ಯಾಂಕ್ ಶಾಖೆಗೆ ಭೇಟಿ ನೀಡಿ, ಅವರ ಮರಣ ಪ್ರಮಾಣ ಪತ್ರದ ಜತೆಯಲ್ಲಿ ತಮ್ಮ ಗುರುತು ಪತ್ರ ನೀಡಿ ತಮಗೆ ಸೇರಬೇಕಾದ ಹಣವನ್ನು ಪಡೆಯಬಹುದು.

ನಿಮ್ಮ ಖಾತೆ ಅನ್‌ಕ್ಲೇಮ್‌ಡ್ ವರ್ಗೀಕೃತಗೊಳ್ಳದಿರಲು ಏನು ಮಾಡಬೇಕು? : ಎಲ್ಲ ಉಳಿತಾಯ, ಚಾಲ್ತಿ ಖಾತೆ ಹಾಗೂ ಸಾವಧಿ ಠೇವಣಿಗಳಿಗೆ ನಾಮಿನಿ ಇಲ್ಲದಿದ್ದರೆ ಸೇರಿಸಿ. ಹಣಕಾಸು ವಹಿವಾಟಿನ ವಿವರ ಕುಟುಂಬಸ್ಥರೊಂದಿಗೆ ಹಂಚಿಕೊಳ್ಳುವುದು ಉತ್ತಮ. ಇದರಿಂದ ಸರಿಯಾದ ಸಂದರ್ಭದಲ್ಲಿ ಅವರಿಗೆ ಬ್ಯಾಂಕ್ ಸಂಪರ್ಕಿಸುವುದು ಸುಲಭವಾಗುತ್ತದೆ. ಬ್ಯಾಂಕ್‌ನಿಂದ ಬರುವ ಮೆಸೇಜ್‌ಗಳ ಮೇಲೆ ನಿಗಾ ಇರಲಿ. ನಿಯಮಿತವಾಗಿ ಬ್ಯಾಂಕ್ ಖಾತೆಗೆ ಕೆವೈಸಿ ಸಲ್ಲಿಸಿ. ಅಗತ್ಯ ಇಲ್ಲದ ಖಾತೆಗಳನ್ನು ರದ್ದುಗೊಳಿಸಿ ಒಂದೆರಡು ಅಗತ್ಯದ ಖಾತೆಗಳನ್ನಷ್ಟೇ ಇಟ್ಟುಕೊಳ್ಳುವುದು ಉತ್ತಮ. ಬ್ಯಾಂಕಿನಿಂದ ನೀಡಲ್ಪಟ್ಟ ಫಿಕ್ಸೆಡ್ ಡಿಪಾಸಿಟ್ ಸರ್ಟಿಫಿಕೆಟ್‌ಗಳನ್ನು ಸುರಕ್ಷಿತವಾಗಿ ಇರಿಸಿಕೊಳ್ಳಿ.

ಕ್ಲೈಮ್ ಮಾಡದೆ ಬಿಟ್ಟ ಠೇವಣಿಗಳನ್ನು ಹಿಂಪಡೆಯಲು ಉದ್ಗಾಮ್ ವೆಬ್ ಆರಂಭ

ಭಾರತದ ವಿವಿಧ ಸರ್ಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ಕೋಟ್ಯಂತರ ರೂಪಾಯಿ ಠೇವಣಿ ಇಡಲಾಗಿದ್ದು, ಯಾವುದೇ ಹಕ್ಕುದಾರರಿಲ್ಲ. ಈ ಹಕ್ಕು ಪಡೆಯದ ಠೇವಣಿಗಳನ್ನು ಪತ್ತೆಹಚ್ಚಲು, ಭಾರತೀಯ ರಿಸರ್ವ್ ಬ್ಯಾಂಕ್ ಉದ್ಗಾಮ್ (UDGAM) ಹೆಸರಿನ ಕೇಂದ್ರೀಕೃತ ವೆಬ್ ಪೋರ್ಟಲ್ ಅನ್ನು ಪ್ರಾರಂಭಿಸಿದೆ. ಈ ಹೊಸ ಪೋರ್ಟಲ್ ಬಗ್ಗೆ ಮಾಹಿತಿ ನೀಡಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ. ಇದರೊಂದಿಗೆ, ಈ ವೇದಿಕೆಯ ಮೂಲಕ ಬ್ಯಾಂಕ್‌ಗಳಲ್ಲಿ ತಮ್ಮ ಕ್ಲೈಮ್ ಮಾಡದ ಹಣವನ್ನು ಪತ್ತೆಹಚ್ಚಿ ಅದನ್ನು ಕ್ಲೈಮ್ ಮಾಡುವಂತೆ ಆರ್‌ಬಿಐ ಗ್ರಾಹಕರನ್ನು ಒತ್ತಾಯಿಸಿದೆ. ನೀವು ಸಹ ಈ ಪೋರ್ಟಲ್ ಅನ್ನು ಬಳಸಲು ಬಯಸಿದರೆ, ಅದರ ಸುಲಭ ಹಂತಗಳ ಬಗ್ಗೆ ನಾವು ನಿಮಗೆ ಮುಂದೆ ತಿಳಿಸಿದ್ದೇವೆ.

UDGAM ಪೋರ್ಟಲ್‌ನಲ್ಲಿ ನಿಮ್ಮನ್ನು ನೋಂದಾಯಿಸಿಕೊಳ್ಳುವುದು ಹೇಗೆ?

1. ಇದಕ್ಕಾಗಿ, ಮೊದಲು UDGAM ಪೋರ್ಟಲ್‌ನ ಅಧಿಕೃತ ವೆಬ್‌ಸೈಟ್ https://udgam.rbi.org.in/unclaimed-deposits/#/register ಕ್ಲಿಕ್ ಮಾಡಿ.
2. ಇಲ್ಲಿ ನಿಮ್ಮ ಹೆಸರು, ಮೊಬೈಲ್ ಸಂಖ್ಯೆ ನಮೂದಿಸಿ.
3. ಇದರ ನಂತರ ನಿಮ್ಮ ಪಾಸ್‌ವರ್ಡ್ ಅನ್ನು ನಮೂದಿಸಿ.
4. ಕೆಳಗೆ ನೀಡಲಾದ ಕ್ಯಾಪ್ಚಾವನ್ನು ನಮೂದಿಸುವ ಮೂಲಕ ವೆಬ್‌ಸೈಟ್‌ನಲ್ಲಿ ನಿಮ್ಮನ್ನು ನೋಂದಾಯಿಸಿಕೊಳ್ಳಿ.

UDGAM ಪೋರ್ಟಲ್‌ನಲ್ಲಿ ಹಕ್ಕು ಪಡೆಯದ ಮೊತ್ತವನ್ನು ಕಂಡುಹಿಡಿಯುವುದು ಹೇಗೆ?

1. ಇದಕ್ಕಾಗಿ, ಮೊದಲು https://udgam.rbi.org.in/unclaimed-deposits/#/login ಕ್ಲಿಕ್ ಮಾಡಿ.
2. ಇಲ್ಲಿ ಮೊಬೈಲ್ ಸಂಖ್ಯೆ, ಪಾಸ್‌ವರ್ಡ್ ಮತ್ತು ಕ್ಯಾಪ್ಚಾ ನಮೂದಿಸಿ.
3. ಇದರ ನಂತರ ನಿಮ್ಮ ಮೊಬೈಲ್‌ಗೆ OTP ಬರುತ್ತದೆ, ಅದನ್ನು ನಮೂದಿಸಿ.
4. ಮುಂದಿನ ಪುಟದಲ್ಲಿ ನೀವು ಖಾತೆದಾರರ ಹೆಸರನ್ನು ನಮೂದಿಸಬೇಕು. ಇದರೊಂದಿಗೆ, ನೀವು ನೀಡಿರುವ ಬ್ಯಾಂಕ್‌ಗಳಿಂದ ಯಾವುದಾದರೂ ಒಂದು ಬ್ಯಾಂಕ್‌ನ ಹೆಸರನ್ನು ಆರಿಸಬೇಕಾಗುತ್ತದೆ.
5. ನಂತರ ನೀವು ಪ್ಯಾನ್, ವೋಟರ್ ಐಡಿ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಪಾಸ್‌ಪೋರ್ಟ್ ಸಂಖ್ಯೆ ಅಥವಾ ಜನ್ಮ ದಿನಾಂಕವನ್ನು ಐಡಿಯಾಗಿ ನಮೂದಿಸಬೇಕು.
6. ಇದರ ನಂತರ ಸರ್ಚ್‌ಆಯ್ಕೆಯ ಮೇಲೆ ಕ್ಲಿಕ್ ಮಾಡಿ. ನೀವು ಯಾವುದೇ ಬ್ಯಾಂಕ್‌ನ ಉಳಿತಾಯ ಅಥವಾ ಎಫ್‌ಡಿಯಲ್ಲಿ ಬಾಕಿ ಮೊತ್ತವನ್ನು ಹೊಂದಿದ್ದರೆ, ಅದರ ಬಗ್ಗೆ ನಿಮಗೆ ತಕ್ಷಣವೇ ತಿಳಿಯುತ್ತದೆ.

ಯಾವ ಬ್ಯಾಂಕ್‌ಗಳ ಬಾಕಿಗಳನ್ನು ಪತ್ತೆಹಚ್ಚಬಹುದು?

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಧನಲಕ್ಷ್ಮಿ ಬ್ಯಾಂಕ್ ಲಿಮಿಟೆಡ್, ಸೌತ್ ಇಂಡಿಯನ್ ಬ್ಯಾಂಕ್, ಡಿಬಿಎಸ್ ಬ್ಯಾಂಕ್ ಲಿಮಿಟೆಡ್ ಮತ್ತು ಸಿಟಿ ಬ್ಯಾಂಕ್‌ನ ಗ್ರಾಹಕರು ಈ ಪೋರ್ಟಲ್ ಮೂಲಕ ಬ್ಯಾಂಕ್‌ಗಳಲ್ಲಿ ಕ್ಲೈಮ್ ಮಾಡದ ಮೊತ್ತವನ್ನು ಸುಲಭವಾಗಿ ಕಂಡುಹಿಡಿಯಬಹುದು. ಉಳಿದ ಬ್ಯಾಂಕ್‌ಗಳಿಗೆ ಈ ಸೌಲಭ್ಯವನ್ನು ಅಕ್ಟೋಬರ್ 15, 2023 ರಿಂದ ಪ್ರಾರಂಭಿಸಲಾಗುವುದು.

ಈ ವರ್ಷವೊಂದರಲ್ಲೇ ಭಾರತದಿಂದ 6,500ಕ್ಕೂ ಹೆಚ್ಚು ಲಕ್ಷಾಧಿಪತಿಗಳು ವಿದೇಶಕ್ಕೆ ವಲಸೆ

2023ರಲ್ಲಿ 5,200 ಲಕ್ಷಾಧಿಪತಿಗಳ ಆಗಮನಕ್ಕೆ ಆಸ್ಟ್ರೇಲಿಯಾ ಸಾಕ್ಷಿಯಾಗಲಿದೆ ಎಂದು ವರದಿ ಭವಿಷ್ಯ ನುಡಿದಿದೆ. 2022ರಲ್ಲಿ ದೊಡ್ಡ ಸಂಖ್ಯೆಯ ಕೋಟ್ಯಧಿಪತಿಗಳನ್ನು ಸ್ವಾಗತಿಸಿದ್ದ ಯುಎಇ ಈ ವರ್ಷ 4,500 ಹೊಸ ಕೋಟ್ಯಧಿಪತಿಗಳನ್ನು ಸ್ವಾಗತಿಸಲಿದೆ. 2023ರಲ್ಲಿ 3,200 ಕೋಟ್ಯಧಿಪತಿಗಳು ಸಿಂಗಾಪುರಕ್ಕೆ ತೆರಳುವ ನಿರೀಕ್ಷೆ ಇದೆ, ಅಮೆರಿಕವೂ ಈ ಪಟ್ಟಿಯಲ್ಲಿದ್ದು 2,100 ಜನರನ್ನು ಸೆಳೆಯುವ ಸಾಧ್ಯತೆ ಇದೆ.

2023ರಲ್ಲಿ 6,500ಕ್ಕೂ ಹೆಚ್ಚು ಲಕ್ಷಾಧಿಪತಿಗಳು ಭಾರತವನ್ನು ಬಿಟ್ಟು ವಿದೇಶಗಳಿಗೆ ಹಾರಿದ್ದಾರೆ ಎಂದು ಹೆನ್ಲಿ ಪ್ರೈವೇಟ್ ಪೋರ್ಟ್ 2023 ವರದಿ ಹೇಳಿದೆ. ಈ ವರ್ಷ ದೇಶದಿಂದ ನಿರ್ಗಮಿಸಲಿರುವ ಲಕ್ಷಾಧಿಪತಿಗಳ ಸಂಖ್ಯೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಚೀನಾ ಸುಮಾರು 13,500 ಹೆಚ್ಚಿನ ಜನರನ್ನು ಕಳೆದುಕೊಳ್ಳಲಿದೆ ಎಂದು ಊಹಿಸಲಾಗಿದೆ. ನಂತರದ ಸ್ಥಾನದಲ್ಲಿ ಭಾರತ ಇದೆ. ಆದಾಗ್ಯೂ ವರದಿಯಲ್ಲಿ ಎರಡನೇ ಅತಿ ದೊಡ್ಡ ನಿರ್ಗಮನದ ಸಂಖ್ಯೆಗಳನ್ನು ಹೊಂದಿದ್ದರೂ ಕಳೆದ ವರ್ಷಕ್ಕೆ ಹೋಲಿಸಿದರೆ ಭಾರತ ಸ್ಥಾನ ಸುಧಾರಿಸುವ ಸಾಧ್ಯತೆ ಇದೆ. ಕಳೆದ ವರ್ಷ ಒಟ್ಟು ಸುಮಾರು 7,500 ಮಿಲಿಯನೇರ್‌ಗಳ ದೇಶ ತೊರೆದಿದ್ದರು.

ನ್ಯೂ ವರ್ಲ್ಡ್ ವೆಲ್ತ್‌ನ ಸಂಶೋಧನಾ ಮುಖ್ಯಸ್ಥರಾದ ಆಂಡ್ರ್ಯೂ ಅಮೊಯಿಲ್ಸ್ ಪ್ರಕಾರ, ಭಾರತವು ವಲಸೆಯಿಂದ ಕಳೆದುಕೊಳ್ಳುವುದಕ್ಕಿಂತ ಹೆಚ್ಚು ಹೊಸ ಮಿಲಿಯನೇರ್‌ಗಳನ್ನು ಉತ್ಪಾದಿಸುವುದರಿಂದ ಈ ಹೊರಹರಿವು ಅಷ್ಟೇನೂ ಮಹತ್ವದಲ್ಲ, ಎಂದಿದ್ದಾರೆ. ಹೆನ್ಲಿ ಮತ್ತು ಪಾಲುದಾರರ ಪ್ರಕಾರ ಮಿಲಿಯನೇರ್‌ಗಳು ಅಥವಾ ಹೆಚ್ಚಿನ ನಿವ್ವಳ ಮೌಲ್ಯದ ವ್ಯಕ್ತಿಗಳು (HNWIs) 1 ಮಿಲಿಯನ್ ಡಾಲರ್ ಅಥವಾ ಅದಕ್ಕಿಂತ ಹೆಚ್ಚಿನ ಹೂಡಿಕೆ ಮಾಡಬಹುದಾದ ಸಂಪತ್ತನ್ನು ಹೊಂದಿರುವ ಜನರು. ಭಾರತದ ರೂಪಾಯಿ ಲೆಕ್ಕದಲ್ಲಿ ಸುಮಾರು 8 ಕೋಟಿ ರೂ.ಗೂ ಹೆಚ್ಚಿನ ಸಂಪತ್ತು ಹೊಂದಿರುವವರು.

ಕಳೆದೊಂದು ದಶಕದಲ್ಲಿ ಮಿಲಿಯನೇರ್‌ಗಳ ವಲಸೆಯು ಸ್ಥಿರವಾಗಿ ಬೆಳೆದಿದೆ ಎಂದು ಹೆನ್ಲಿ & ಪಾರ್ಟ್ನರ್ಸ್ನ ಸಿಇಒ ಡಾ. ಜುರ್ಗ್ ಸ್ಟೆಫೆನ್ ಹೇಳಿದ್ದಾರೆ. 2023 ಮತ್ತು 2024ರಲ್ಲಿ ಜಾಗತಿಕವಾಗಿ ಅಂದಾಜು ಸುಮಾರು 1,22,000 ಮತ್ತು 1,28,000 ಕೋಟ್ಯಧಿಪತಿಗಳು ವಲಸೆ ಹೋಗುವ ನಿರೀಕ್ಷೆ ಇದೆ.

ಭಾರತದಿಂದ ಏಕೆ ವಲಸೆ?

ದೇಶದಲ್ಲಿರುವ ಸಂಕೀರ್ಣ ತೆರಿಗೆ ಕಾನೂನುಗಳು ಸೇರಿ ವಿವಿಧ ವಿಚಾರಗಳು ಭಾರತದಿಂದ ಜನರು ವಲಸೆ ಹೋಗಲು ಪ್ರಮುಖ ಕಾರಣವಾಗಿದೆ ಎಂದು ಪ್ರೈವೇಟ್ವೆಲ್ತ್ ಮತ್ತು ಫ್ಯಾಮಿಲಿ ಆಫೀಸ್ ಪಾಲುದಾರರಾದ ಸುನೀತಾ ಸಿಂಗ್ದಲಾಲೆ ಹೇಳಿದ್ದಾರೆ.

ಇತ್ತೀಚಿನ ವರದಿಯ ಪ್ರಕಾರ ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಹೂಡಿಕೆ ವಲಸೆ ಯೋಜನೆಗಳಿಗಾಗಿ ಭಾರತೀಯರು ಮತ್ತು ಅಮೆರಿಕನ್ನರಿಂದ ಗಮನಾರ್ಹ ಬೇಡಿಕೆಗಳು ಬಂದಿವೆ.

ಲಕ್ಷಾಧಿಪತಿಗಳು ಎಲ್ಲಿಗೆ ಹೋಗುತ್ತಿದ್ದಾರೆ?

2023ರಲ್ಲಿ 5,200 ಲಕ್ಷಾಧಿಪತಿಗಳ ಆಗಮನಕ್ಕೆ ಆಸ್ಟ್ರೇಲಿಯಾ ಸಾಕ್ಷಿಯಾಗಲಿದೆ ಎಂದು ವರದಿ ಭವಿಷ್ಯ ನುಡಿದಿದೆ. 2022ರಲ್ಲಿ ದೊಡ್ಡ ಸಂಖ್ಯೆಯ ಕೋಟ್ಯಧಿಪತಿಗಳನ್ನು ಸ್ವಾಗತಿಸಿದ್ದ ಯುಎಇ ಈ ವರ್ಷ 4,500 ಹೊಸ ಕೋಟ್ಯಧಿಪತಿಗಳನ್ನು ಸ್ವಾಗತಿಸಲಿದೆ. 2023ರಲ್ಲಿ 3,200 ಕೋಟ್ಯಧಿಪತಿಗಳು ಸಿಂಗಾಪುರಕ್ಕೆ ತೆರಳುವ ನಿರೀಕ್ಷೆ ಇದೆ, ಅಮೆರಿಕವೂ ಈ ಪಟ್ಟಿಯಲ್ಲಿದ್ದು 2,100 ಜನರನ್ನು ಸೆಳೆಯುವ ಸಾಧ್ಯತೆ ಇದೆ.

ಯಾವಾಗ ಬಂದೀತು ಬಡ್ಡಿ ಇಳಿಕೆಯ ಕಾಲ?

ರಾಜೇಶ್‌ಕುಮಾರ್ ಟಿ.ಆರ್.

ಸಾಲಗಳ ಮೇಲಿನ ಬಡ್ಡಿದರ ಹೆಚ್ಚಳದಿಂದ ತೊಂದರೆಗೆ ಒಳಗಾಗಿರುವವರಿಗೆ 2023ರ ವರ್ಷಾಂತ್ಯದಲ್ಲಿ ಬಡ್ಡಿದರ ಕಡಿತದ ಸಿಹಿ ಸುದ್ದಿ ಸಿಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಕಳೆದ ಎರಡು ಸಭೆಗಳಲ್ಲಿ ರೆಪೊದರವನ್ನು ಯಥಾಸ್ಥಿತಿಯಲ್ಲಿ ಇರಿಸಿರುವುದು ಇಂಥದ್ದೊಂದು ಆಶಾಭಾವನೆ ಹುಟ್ಟು ಹಾಕಿದೆ. ಸಾಲದ ಮೇಲಿನ ಬಡ್ಡಿ ಕಡಿತದ ಮುನ್ಸೂಚನೆ ಸಿಕ್ಕಿರುವ ಈ ಸಂದರ್ಭದಲ್ಲಿ ಈಗಾಗಲೇ ಸಾಲ ಪಡೆದಿರುವವರು ಏನು ಮಾಡಬೇಕು, ಹೊಸದಾಗಿ ಸಾಲದ ಮೊರೆ ಹೋಗುವವರು ಯಾವ ಮಾರ್ಗ ಅನುಸರಿಸಬೇಕು, ಸಾಲವನ್ನು ಅವಧಿಗೆ ಮುನ್ನ ಮರುಪಾವತಿ ಮಾಡಬೇಕೇ ಎಂಬ ಪ್ರಶ್ನೆಗಳು ಮೂಡಬಹುದು. ಆ ಬಗ್ಗೆ ಒಂದು ನೋಟ ಹರಿಸೋಣ.

ಹೆಚ್ಚಾಗಿದೆ ಸಾಲದ ಇಎಂಐ : 2022ರ ಮೇ ತಿಂಗಳಿನಿಂದ ಈಚೆಗೆ ಆರ್‌ಬಿಐ, ರೆಪೊದರವನ್ನು (ಅಂದರೆ, ಬ್ಯಾಂಕ್‌ಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿದರ) ಒಟ್ಟಾರೆ ಶೇಕಡ 2.5ರಷ್ಟು ಹೆಚ್ಚಳ ಮಾಡಿದೆ. ಬೆಲೆ ಏರಿಕೆ (ಹಣದುಬ್ಬರ) ನಿಯಂತ್ರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ. ರೆಪೊದರ ಹೆಚ್ಚಳದ ಪರಿಣಾಮವಾಗಿ ಗೃಹ ಸಾಲ, ವಾಹನ ಸಾಲ, ವೈಯಕ್ತಿಕ ಸಾಲಗಳ ಮೇಲಿನ ಬಡ್ಡಿತುಟ್ಟಿಯಾಗಿದೆ. ಕಳೆದ ಒಂದು ವರ್ಷದಲ್ಲಿ ಆಗಿರುವ ಬಡ್ಡಿದರ ಹೆಚ್ಚಳದಿಂದಾಗಿ, ಸಾಲ ಪಡೆದಿರುವವರ ಮಾಸಿಕ ಕಂತುಗಳ ಮೊತ್ತದಲ್ಲಿ ಹೆಚ್ಚಳವಾಗಿದೆ.

ಉದಾಹರಣೆಗೆ, ಬಡ್ಡಿ ಹೆಚ್ಚಳದ ಪರಿಣಾಮ ಹೇಗಿದೆ ಎಂದರೆ, 15 ವರ್ಷಗಳ ಅವಧಿಗೆ ಸಾಲ ಪಡೆದಿರುವವರ ಮಾಸಿಕ ಕಂತಿನ ಮೊತ್ತದಲ್ಲಿ (ಇಎಂಐ) ಶೇಕಡ 16ರಷ್ಟು ಹೆಚ್ಚಳವಾಗಿದೆ. 20 ವರ್ಷಗಳ ಅವಧಿಗೆ ಸಾಲ ತೆಗೆದುಕೊಂಡಿದ್ದರೆ, ಮಾಸಿಕ ಕಂತಿನ ಮೊತ್ತವು ಶೇ 20ರಷ್ಟು ಮತ್ತು 30 ವರ್ಷಕ್ಕೆ ಸಾಲ ಪಡೆದಿದ್ದರೆ ಇಎಂಐ ಶೇ 26.5ರಷ್ಟು ಏರಿಕೆಯಾಗಿದೆ. ಸರಳವಾಗಿ ಹೇಳುವುದಾದರೆ 2022ರ ಏಪ್ರಿಲ್‌ನಲ್ಲಿ ನಿಮ್ಮ ಸಾಲದ ಮೇಲಿನ ಬಡ್ಡಿದರ ಶೇ 6.75ರಷ್ಟಿದ್ದರೆ ಈಗ ಬಡ್ಡಿದರ ಶೇ. 9.25ಕ್ಕೆ ತಲುಪಿದೆ. ಆದರೆ, ಇನ್ನುಎರಡು ತ್ರೈಮಾಸಿಕ ಅವಧಿಗಳ ಬಳಿಕ ಬಡ್ಡಿದರದ ಇಳಿಕೆ ಕಾಲ ಶುರುವಾಗುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ.

ಫ್ಲೋಟಿಂಗ್ ದರ ಸೂಕ್ತ : ಹೊಸದಾಗಿ ಗೃಹ ಸಾಲ ಪಡೆಯುವವರು ಫ್ಲೋಟಿಂಗ್ ರೇಟ್ ಬಡ್ಡಿದರದಲ್ಲಿ ಸಾಲ ಪಡೆಯುವುದು ಸೂಕ್ತ. ಮುಂದಿನ ಕೆಲವು ತಿಂಗಳ ಬಳಿಕ ಬಡ್ಡಿದರದಲ್ಲಿ ಇಳಿಕೆ ಆಗಬಹುದು ಎಂದು ಹಣಕಾಸು ತಜ್ಞರು ನಿರೀಕ್ಷೆ ಮಾಡಿರುವ ಕಾರಣ, ನಿಶ್ಚಿತ ಬಡ್ಡಿದರಕ್ಕೆ ಸಾಲ ಪಡೆಯುವುದು ಅಷ್ಟು ಸೂಕ್ತ ನಿರ್ಧಾರವಾಗುವುದಿಲ್ಲ. ಸದ್ಯದ ಬಡ್ಡಿದರದ ಸ್ಥಿತಿಯಲ್ಲಿ ಗೃಹ ಸಾಲ ಪಡೆಯುವಾಗ ನಿಶ್ಚಿತ ಬಡ್ಡಿದರ ಆಯ್ಕೆ ಮಾಡಿಕೊಂಡರೆ ಹೆಚ್ಚೆಂದರೆ ಶೇ 9.5ರ ನಿಗದಿತದರದಲ್ಲಿ ಸಾಲ ಲಭಿಸಬಹುದು. ಆದರೆ ಈಗ ನೀವು ಫ್ಲೋಟಿಂಗ್ ರೇಟ್ ಆಯ್ಕೆ ಮಾಡಿಕೊಂಡರೆ, ಮುಂದೆ ಆರ್‌ಬಿಐ ರೆಪೊ ದರವನ್ನು ಶೇ 1ರಷ್ಟು ಇಳಿಕೆ ಮಾಡಿದರೂ ನಿಮ್ಮ ಸಾಲದ ಬಡ್ಡಿದರ ಶೇ 8.5ಕ್ಕೆ ಇಳಿಕೆಯಾಗಬಹುದು. ಹಾಗಾಗಿ ನಿಶ್ಚಿತ ಬಡ್ಡಿದರದಲ್ಲಿ ಸಾಲ ಪಡೆಯುವುದು ಸದ್ಯಕ್ಕೆ ಸೂಕ್ತವಲ್ಲ.

ಗೃಹ ಸಾಲ ಸ್ವಿಚ್ ಮಾಡಿ : ಹಾಲಿ ಸಾಲ ಪಡೆದಿರುವ ಬ್ಯಾಂಕಿನಲ್ಲಿ ಬಡ್ಡಿದರ ವಿಪರೀತವಾಗಿದ್ದರೆ ಗೃಹ ಸಾಲ ಸ್ವಿಚ್ ಮಾಡುವ ಬಗ್ಗೆ ಚಿಂತನೆ ಮಾಡಬಹುದು. ಬಡ್ಡಿ ದರದಲ್ಲಿ ಶೇ.0.5ಕ್ಕಿಂತ ಹೆಚ್ಚು ವ್ಯತ್ಯಾಸವಿದ್ದರೆ ಗೃಹ ಸಾಲವನ್ನು ಕಡಿಮೆ ಬಡ್ಡಿದರಕ್ಕೆ ಸಾಲ ನೀಡುವ ಮತ್ತೊಂದು ಬ್ಯಾಂಕಿಗೆ ವರ್ಗಾಯಿಸಿಕೊಳ್ಳುವ ಆಲೋಚನೆ ಮಾಡಬಹುದು. ಗೃಹ ಸಾಲ ವರ್ಗಾವಣೆಗೆ ಮುಂದಾಗುವಾಗ ಸಾಧಕ ಬಾಧಕಗಳನ್ನು ಅಳೆದು ತೂಗಿ ಮುಂದುವರಿಯಬೇಕು.

ಬೇಗ ಸಾಲ ಮರುಪಾವತಿ ಮಾಡಬೇಕಾ? : ಆರ್‌ಬಿಐ ಮೇಲಿಂದ ಮೇಲೆ ರೆಪೊದರ ಹೆಚ್ಚಳ ಮಾಡಿದ ಪರಿಣಾಮವಾಗಿ ಸಾಲ ಪಡೆದವರಿಗೆ ಇಎಂಐ ಹೊರ ಜಾಸ್ತಿಯಾಗುತ್ತಿತ್ತು. ಸದ್ಯ ಆರ್‌ಬಿಐ ರೆಪೊ ದರವನ್ನು ಶೇ 6.5ರಲ್ಲಿ ಇರಿಸಿದ. ಇಂತಹ ಹೊತ್ತಿನಲ್ಲಿ, ಗೃಹಸಾಲದ ಭಾಗಶಃ ಪಾವತಿ ಅಥವಾ ಪೂರ್ಣ ಮರುಪಾವತಿ ಪರಿಗಣಿಸಬಹುದು. ಬೇಗ ಸಾಲ ಮರುಪಾವತಿ ಮಾಡಿದಾಗ ಸಾಲಕ್ಕೆ ಕಟ್ಟುವ ದೊಡ್ಡ ಮೊತ್ತದ ಬಡ್ಡಿ ಉಳಿತಾಯವಾಗುತ್ತದೆ.

ಎಫ್.ಡಿ.ಗಳಿಗಿಂತ ಉತ್ತಮ : ಸದ್ಯ ಬಡ್ಡಿದರ ಹೆಚ್ಚಿದೆ ಎನ್ನುವ ಕಾರಣಕ್ಕೆ ಅನೇಕರು ನಿಶ್ಚಿತ ಠೇವಣಿ (ಎಫ್.ಡಿ) ಹೂಡಿಕೆ ಮಾಡಿದ್ದಾರೆ. ಆದರೆ ಬಡ್ಡಿದರ ಇಳಿಕೆಯ ಸಮಯ ಬಂದಾಗ ಎಫ್.ಡಿ. ಹೂಡಿಕೆಗಳಿಂದ ಪ್ರಯೋಜನವಾಗುವುದಿಲ್ಲ. ರೆಪೊದರ ಇಳಿಕೆಯಾದಂತೆ ಎಫ್.ಡಿ ಬಡ್ಡಿ ದರಗಳೂ ತಗ್ಗುತ್ತವೆ. ಹಾಗಾಗಿ ಹಣದುಬ್ಬರ ಪ್ರಮಾಣ ಮೀರಿದ ಲಾಭಾಂಶ ಕೊಡುವ ಮ್ಯೂಚುವಲ್ ಫಂಡ್‌ನಂತಹ ಹೂಡಿಕೆಗಳತ್ತ ಚಿತ್ತ ಹರಿಸುವುದು ಒಳಿತು.

ಹಣದುಬ್ಬರ ತಡೆಯಲು ಆರ್‌ಬಿಐ ವಿಫಲವಾಗುತ್ತಿರುವುದಕ್ಕೆ ಕಾರಣಗಳೇನು?

ಪ್ರಸ್ತುತ ಕೇಂದ್ರ ಸರ್ಕಾರ ಬಂದ ಮೇಲೆ ಆರ್‌ಬಿಐ ಒಂದು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಭಾರತದ ಆರ್ಥಿಕತೆಯ ಹಣಕಾಸು ಶಿಸ್ತು, ನಿರ್ವಹಣೆ ಮತ್ತು ಹಣದುಬ್ಬರವನ್ನು ಸರಾಸರಿ ಶೇ.4 ರ ಮಟ್ಟದಲ್ಲಿ ಉಳಿಸಿಕೊಳ್ಳಬೇಕಾದ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂವಿಧಾನ ಹೊರಿಸಿದ್ದ ಜವಾಬ್ದಾರಿಯನ್ನು ಮರೆತು, ಅದು ಕೇಂದ್ರ ಸರ್ಕಾರದ ತಕ್ಷಣದ ಹಣಕಾಸು ಅಗತ್ಯಗಳನ್ನು ಪೂರೈಸುವುದರಲ್ಲಿ ಮಗ್ನವಾಗಿದೆ.

ಭಾರತದಲ್ಲಿ ಹಣದುಬ್ಬರ ದಿನೇದಿನೇ ಹೆಚ್ಚಾಗುತ್ತಿದೆ. ರೂಪಾಯಿ ಮೌಲ್ಯ ಐತಿಹಾಸಿಕ ಅಧಃಪತನದತ್ತ ಸಾಗುತ್ತಿದೆ. ನಿನ್ನೆ ಅದು ಒಂದು ಡಾಲರಿಗೆ 78.28 ರೂ.ಗೆ ಇಳಿದಿತ್ತು. ಇದರಿಂದ ಅಗತ್ಯ ವಸ್ತುಗಳ ಬೆಲೆ ಇನ್ನಷ್ಟು ಗಗನ ಮುಟ್ಟಿ ಭಾರತದ ಶ್ರೀಸಾಮಾನ್ಯರ ಅದರಲ್ಲೂ ಬಡವರ ಬದುಕು ಇನ್ನಷ್ಟು ದುಸ್ತರವಾಗುತ್ತಿದೆ...

ಈ ಬಗೆಯ ದುರಂತಗಳನ್ನು ತಡೆಯಲೆಂದೇ ಅದರಲ್ಲೂ ವಿಶೇಷವಾಗಿ ಹಣದುಬ್ಬರವನ್ನು ತಡೆಯಲೆಂದೇ ಆರ್‌ಬಿಐಗೆ ವಿಶೇಷ ಹಾಗೂ ಸ್ವತಂತ್ರ ಸಾಂವಿಧಾನಿಕ ಜವಾಬ್ದಾರಿಯನ್ನು ಕೊಡಲಾಗಿದೆ.

ಆರ್‌ಬಿಐ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆಯೇ?

ಪ್ರಸ್ತುತ ಕೇಂದ್ರ ಸರ್ಕಾರದಲ್ಲಿ 2014–18 ರವರೆಗೆ ಪ್ರಧಾನ ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡಿದ್ದ ಅರವಿಂದ ಸುಬ್ರಹ್ಮಣ್ಯಂ ಅವರು ಈ ಕುರಿತು "On Inflation, how the RBI failed, why it matters" ಎನ್ನುವ ಶೀರ್ಷಿಕೆಯಲ್ಲಿ ಒಂದು ಸುದೀರ್ಘ ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ಆರ್‌ಬಿಐನ ಸಾಂವಿಧಾನಿಕ ವೈಫಲ್ಯತೆಗೆ ಮುಂದಿಟ್ಟಿರುವ ಕಾರಣಗಳಿವೆ:

ಪ್ರಸ್ತುತ ಕೇಂದ್ರ ಸರ್ಕಾರ ಬಂದ ಮೇಲೆ ಆರ್‌ಬಿಐ ಒಂದು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಭಾರತದ ಆರ್ಥಿಕತೆಯ ಹಣಕಾಸು ಶಿಸ್ತು, ನಿರ್ವಹಣೆ ಮತ್ತು ಹಣದುಬ್ಬರವನ್ನು ಸರಾಸರಿ ಶೇ.4 ರ ಮಟ್ಟದಲ್ಲಿ ಉಳಿಸಿಕೊಳ್ಳಬೇಕಾದ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂವಿಧಾನ ಹೊರಿಸಿದ್ದ ಜವಾಬ್ದಾರಿಯನ್ನು ಮರೆತು, ಅದು ಕೇಂದ್ರ ಸರ್ಕಾರದ ತಕ್ಷಣದ ಹಣಕಾಸು ಅಗತ್ಯಗಳನ್ನು ಪೂರೈಸುವುದರಲ್ಲಿ ಮಗ್ನವಾಗಿದೆ.

ಸರ್ಕಾರದ ಆರ್ಥಿಕ ನೀತಿಗಳ ಬಗ್ಗೆ ಮಾರುಕಟ್ಟೆಯಲ್ಲಿ ವಿಶ್ವಾಸ ಉಳಿಸುವ ಸಲುವಾಗಿ ಶತಾಯಗತಾಯ ರೂಪಾಯಿ ಬೆಲೆ ಕುಸಿಯದಂತೆ ಮಾಡಲು ವಿದೇಶಿ ವಿನಿಮಯ ಸಂಗ್ರಹವನ್ನು ರೂಪಾಯಿ ಮರು ಖರೀದಿಗೆ ವ್ಯಯಮಾಡುತ್ತಿದೆ.

ಹಣದುಬ್ಬರವು 2019ರಿಂದಲೇ ಕಾನೂನು ವಿಧಿಸಿದ ಮಟ್ಟವನ್ನು ಮೀರಿದ್ದರೂ ಆರ್‌ಬಿಐ ಕೇಂದ್ರ ಸರ್ಕಾರ ಬಯಸಿದಂತೆ ಅದನ್ನು ಕೇವಲ ತಾತ್ಕಾಲಿಕ ವಿದ್ಯಮಾನ ಎಂದು ಘೋಷಿಸುತ್ತ ಬಂದಿತು. ಅದರ ಬದಲಿಗೆ ಆಗಲೇ ಸೂಕ್ತ ಹಣಕಾಸು ಕ್ರಮಗಳನ್ನು ತೆಗೆದುಕೊಂಡಿದ್ದರೆ ಹಣದುಬ್ಬರ ತಗ್ಗುತ್ತಿತ್ತು.

ಆದರೆ ಆಗ ಭಾರತದಲ್ಲಿ ಹಣಕಾಸು ಹೂಡಿಕೆ ಆಕರ್ಷಕವಾಗಿ ಕಾಣದೆ ವಿದೇಶಿ ಷೇರು ಹೂಡಿಕೆದಾರರು ಭಾರತವನ್ನು ತೊರೆಯುತ್ತಿದ್ದರು. ಇದು ಮೋದಿ ಸರ್ಕಾರದ ಮೇಲೆ ಕೆಟ್ಟ ಟಿಪ್ಪಣಿ ಮಾಡಿದಂತಾಗುತ್ತಿತ್ತು.

ಆದ್ದರಿಂದ ಆರ್‌ಬಿಐ ಅಂಥಾ ಕ್ರಮಗಳಿಗೆ ಮುಂದಾಗದೆ ಭಾರತದ ಶ್ರೀಸಾಮಾನ್ಯರು ಹೆಚ್ಚಿನ ಹಣದುಬ್ಬರವನ್ನು ಅನುಭವಿಸುವಂತೆ ಮಾಡಿತು. ಇದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಮೊತ್ತದ ಡಿವಿಡೆಂಡ್ ಒದಗಿಸುವುದನ್ನು ತನ್ನ ಕರ್ತವ್ಯವನ್ನಾಗಿ ಭಾವಿಸಿದ ಆರ್‌ಬಿಐ ಹಣದುಬ್ಬರ ತಡೆಯುವ ಕ್ರಮಗಳನ್ನು ಮುಂದೂಡಿತು.

ಆರ್‌ಬಿಐ ಗೌವರ್ನರ್ ತೆಗೆದುಕೊಂಡ ಈ ಎಲ್ಲಾ ಕ್ರಮಗಳಿಗೂ ಮಾನಿಟರಿ ಪಾಲಿಸಿ ಕಮಿಟಿ (MPC) ಮತ್ತು ಅದಕ್ಕೆ ಸರ್ಕಾರ ನೇಮಿಸಿದ್ದ ಸ್ವತಂತ್ರ ಅರ್ಥ ಶಾಸ್ತ್ರಜ್ಞರೂ ಸಂಪೂರ್ಣ ಒಪ್ಪಿಗೆ ಸೂಚಿಸುತ್ತಿದ್ದದ್ದು ಇನ್ನಷ್ಟು ಆಶ್ಚರ್ಯಕರ ಸಂಗತಿಯಾಗಿದೆ. ಆದರೆ ಆರ್‌ಬಿಐ ನೀತಿಗಳು ದೇಶದ ಜನರಿಗಿಂತ ಕೇಂದ್ರ ಸರ್ಕಾರಕ್ಕೆ ಹಿತವಾಗಿ ನಡೆದುಕೊಂಡಿದೆ. ಇದು ಆರ್‌ಬಿಐನ ಸಾಂಸ್ಥಿಕ ವಿಶ್ವಾಸಾರ್ಹತೆ ಮತ್ತು ಸ್ವಾಯತ್ತತೆಯ ಬಗ್ಗೆ ತೀವ್ರವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.

ಅಮೆರಿಕಾ ಫೆಡರಲ್ ಬಡ್ಡಿ ದರ ಹೆಚ್ಚಿಸಿದರೆ ಭಾರತದ ಆರ್ಥಿಕತೆಯ ಮೇಲೆ ಆಗುವ ಪರಿಣಾಮಗಳೇನು...?

ರಂಗಸ್ವಾಮಿ ಮೂನಕನಹಳ್ಳಿ

ಜಗತ್ತು ಹಿಂದೆಂದಿಗಿಂತಲೂ ಇಂದು ಹೆಚ್ಚಿನ ಅನಿಶ್ಚಿತತೆಯಿಂದ ತುಂಬಿದೆ. ಅದರಲ್ಲೂ ವಿತ್ತ ಜಗತ್ತಿನಲ್ಲಿ ತಲ್ಲಣಗಳು ನಿಲ್ಲುವ ಲಕ್ಷಣಗಳೇ ಕಾಣುತ್ತಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಕೋವಿಡ್ ಸಮಯದಲ್ಲಿ ಅಮೆರಿಕಾ ಸೇರಿದಂತೆ ಒಂದೈದಾರು ದೇಶಗಳು ಅವಶ್ಯಕತೆಗೆ ತಕ್ಕಂತೆ ಹಣವನ್ನ ಮುದ್ರಿಸಿದ್ದು. ಅದು ತಾತ್ಕಾಲಿಕ ಶಮನವನ್ನ ನೀಡಿತು. ಆದರೆ ಧೀರ್ಘಾವಧಿಯಲ್ಲಿ ಹಣದುಬ್ಬರವನ್ನ ಅದು ಹೆಚ್ಚು ಮಾಡಿತು.

ಒಂದೊಕ್ಕೊಂದು ನೇರ ಸಂಬಂಧವಿರುವ ಈ ಕಾರಣಗಳು ಹಣದ ಮೌಲ್ಯ ಇನ್ನಿಲ್ಲದಂತೆ ಕುಸಿಯಲು ಪ್ರಮುಖ ಕಾರಣಗಳಾದವು. ಹೆಚ್ಚುತ್ತಿರುವ ಹಣದುಬ್ಬರವನ್ನ ತಡೆಯಲು ಬೇರೆ ದಾರಿಯಿಲ್ಲದೆ ಅಮೆರಿಕಾ ಕಳೆದ ಮೂರು ವರ್ಷದಿಂದ ಒಂದೇ ಸಮನೆ ಫೆಡರಲ್ ಬಡ್ಡಿ ದರವನ್ನ ಹೆಚ್ಚಿಸುತ್ತಲೆ ಬಂದಿವೆ. ಜಗತ್ತಿನ ಬೇರೆ ಯಾವುದೇ ದೇಶವಾಗಿದ್ದರೂ ಈ ಮಟ್ಟದ ಹಣದುಬ್ಬರ ಮತ್ತು ಬಡ್ಡಿ ಏರಿಕೆಗೆ ಈ ವೇಳೆಗೆ ಕುಸಿತವನ್ನ ಕಾಣಬೇಕಿತ್ತು. ಅಮೇರಿಕಾ ಕೂಡ ಕುಸಿದಿದೆ ಆದರೆ ಗಮನಿಸಿ ಅಮೇರಿಕಾ ಕುಸಿದರೆ ಜಾಗತಿಕ ವಿತ್ತ ಜಗತ್ತು ಕೂಡ ಕುಸಿಯುತ್ತದೆ. ಅದು ಯಾವುದೇ ಕಾರಣದಿಂದ ಜಗತ್ತಿಗೆ ಒಳ್ಳೆಯದಲ್ಲ. ಹೀಗಾಗಿ ಅದರ ಕುಸಿತವನ್ನ ಮುಂದೂಡಲಾಗುತ್ತಿದೆ.

ಅಮೇರಿಕಾದಲ್ಲಿ ನಡೆಯುತ್ತಿರುವ ಮಂದಗತಿಗೆ ಫೆಡರಲ್ ಬಡ್ಡಿ ದರವೇ ಕಾರಣ ಎಂದು ಡೊನಾಲ್ಡ್ ಟ್ರಂಪ್ ದೂರುತ್ತಿದ್ದರು. ಬಡ್ಡಿ ದರವನ್ನ ಇಳಿಸುವುದಷ್ಟೇ ಅಲ್ಲ ಅದನ್ನ ನೆಗಟಿವ್ ದರಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವುದು ಅವರ ಉದ್ದೇಶವಾಗಿತ್ತು. ಫೆಡರಲ್ ಬ್ಯಾಂಕಿನ ನಿಲುವುಗಳು ಮತ್ತು ಅದರ ಕಾರ್ಯ ವೈಖರಿಯ ಬಗ್ಗೆ ಎಲ್ಲರ ಮುಂದೆ ತಮ್ಮ ಅಸಮಾಧಾನವನ್ನ ಹೊರಹಾಕುತ್ತಿದ್ದರು. ಬ್ಯಾಂಕಗಳ ಬಡ್ಡಿ ದರವನ್ನ ಋಣಾತ್ಮಕ ಮಾಡಿ, ಏಕಿಷ್ಟು ಪುಕ್ಕಲು ತನದಿಂದ ವರ್ತಿಸುತ್ತೀರಿ? ಎನ್ನುವ ಮಾತನ್ನ ಕೂಡ ಟ್ರಂಪ್ ಆಡಿದ್ದರು ಎನ್ನುವುದನ್ನ ನಾವು ಎಂದಿಗೂ ಮರೆಯಬಾರದು. ಟ್ರಂಪ್ ಸೋಲಲು ಇದು ಪ್ರಮುಖ ಕಾರಣವಾಯ್ತು. ಗಮನಿಸಿ ನೋಡಿ ಅಂದಿನಿಂದ ಇಂದಿನವರೆಗೆ ಫೆಡರಲ್ ಬಡ್ಡಿ ದರ ಏರುತ್ತಲೇ ಇದೆ. ಟ್ರಂಪ್ ಇದಿದ್ದರೆ ಎಲ್ಲವೂ ಸುಖಮಯವಾಗಿರುತ್ತಿತ್ತು ಎನ್ನುವಂತಿಲ್ಲ, ಇಂದಿಗಿಂತ ಜಾಗತಿಕ ಆರ್ಥಿಕತೆ ಅದರಲ್ಲೂ ಅಮೆರಿಕಾದ ಆರ್ಥಿಕತೆ ಒಂದಷ್ಟು ಉತ್ತಮವಾಗಿರುತ್ತಿತ್ತು ಎನ್ನುವುದು ನಿರ್ವಿವಾದ.

ಹೀಗೆ ಜಗತ್ತಿನ ಪ್ರಮುಖ ಮನಿ ಸ್ಪಿನ್ನರ್ (money spinner) ದೇಶಗಳು

ಆರ್ಥಿಕ ಮಂದಗತಿಯಿಂದ ಬಳಲುತ್ತಿರುವುದು ಹೆಚ್ಚು ಕಡಿಮೆ ಗೊತ್ತಿದ್ದೂ ಗೊತ್ತಿಲ್ಲದೇ ಇರುವ ವಿಷಯವಾಗಿದೆ. ಇವೆಲ್ಲವುಗಳ ನಡುವೆ ಭಾರತ ಆರ್ಥಿಕತೆಗೆ ವೇಗವಾಗಿ ಅಭಿವೃದ್ಧಿ ಹೊಂದುತ್ತಾ ಸಾಗಲಿದೆ. ಭಾರತದ ಬಲಿಷ್ಠ ಮಧ್ಯಮವರ್ಗ ಜಗತ್ತಿನ ಎಲ್ಲಾ ದೇಶಗಳ ಕಣ್ಣಿಗೆ ಉತ್ತಮ ಮಾರುಕಟ್ಟೆ, ಗ್ರಾಹಕರಂತೆ ಕಾಣುತ್ತಿದ್ದರೆ ಅದರಲ್ಲಿ ಆಶ್ಚರ್ಯ ಪಡುವ ವಿಷಯವೇನಿಲ್ಲ. ಮುಂದಿನ ಹತ್ತು ವರ್ಷದಲ್ಲಿ ಭಾರತ ಅತ್ಯಂತ ವೇಗವಾಗಿ ಬೆಳೆಯಲಿದೆ ಇದರಿಂದ ಭಾರತದ ಲಕ್ಷಾಂತರ ಬಡವರು ಬಡತನದ ರೇಖೆಯಿಂದ ಹೊರಬಂದು ಉತ್ತಮ ಜೀವನ ನಡೆಸಲಿದ್ದಾರೆ ಎನ್ನುವುದು ಕೂಡ ಸತ್ಯ. ಭಾರತದಲ್ಲಿ ಹೂಡಿಕೆ ಮಾಡಲು ಇಚ್ಛಿಸುವ ಹೂಡಿಕೆದಾರರು ಅವರು ವಿದೇಶಿಯಾಗಿರಲಿ ಅಥವಾ ಡೊಮೆಸ್ಟಿಕ್ ಇನ್ವೆಸ್ಟರ್ಸ್ ಆಗಿರಲಿ, ಅವರಿಗೆ ಪ್ರಮುಖವಾಗಿ ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಸೌಲಭ್ಯಗಳಲ್ಲಿ ಹೆಚ್ಚಿನ ಅವಕಾಶಗಳು ತೆರೆದುಕೊಳ್ಳಲಿವೆ. ಈ ಕ್ಷೇತ್ರದ ಕಡೆ ಹೆಚ್ಚಿನ ಗಮನ ನೀಡಬಹುದು.

ಒಂದೇ ಸಮನೆ ಏರುತ್ತಿರುವ ಫೆಡರಲ್ ಬಡ್ಡಿ ದರ, ಏರುತ್ತಿರುವ ತೈಲ ಬೆಲೆ, ಪರ್ಯಾಯವಿಲ್ಲದ ವರ್ಲ್ಡ್ ಕರೆನ್ಸಿ (world currency), ಬೆಲೆ ಇವೆಲ್ಲಾ ಒಗ್ಗೂಡಿ ಡಾಲರ್ ಅನ್ನು ಬಹಳ ಬಲಿಷ್ಠವಾಗಿಸಿವೆ. ಗಮನಿಸಿ ತೈಲ ಬೆಲೆಯನ್ನ ಏರುಪೇರು ಮಾಡುವುದು ಅಮೇರಿಕಾ, ಫೆಡರಲ್ ಬಡ್ಡಿ ಏರಿಸುವುದು ಕೂಡ ಅದರ ಕೈಲಿದೆ, ಜಗತ್ತಿಗೆ ಇಂದು ಸದ್ಯದ ಮಟ್ಟಿಗಂತೂ ಡಾಲರ್‌ಗೆ ಪರ್ಯಾಯ

ಸದ್ಯದ ಮಟ್ಟಿಗೆ ಕೇಂದ್ರ ಸರಕಾರ ಕೆಳಗಿನ ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಯತತ್ಪರಾಗಬೇಕಾದ ಅನಿವಾರ್ಯತೆ ಹೆಚ್ಚಾಗಿದೆ

1. **ಬೆಲೆಯೇರಿಕೆ, ಹಣದುಬ್ಬರ :** ಸಮಾಜದಲ್ಲಿ ಏರುತ್ತಿರುವ ಸೇವೆ ಮತ್ತು ಸರಕಿನ ಬೆಲೆ ಜನ ಸಾಮಾನ್ಯರ ಜೀವನವನ್ನ ಸಂಕಷ್ಟಕ್ಕ ದೂಡಿವೆ. ಇದನ್ನ ನಿಯಂತ್ರಣಕ್ಕೆ ತರದು ಹೊರತು ಕೇಂದ್ರ ಸರಕಾರಕ್ಕೆ ಗೆಲುವಿನ ನಗೆ ಬೀರಲು ಸಾಧ್ಯವಿಲ್ಲ.

2. **ತೈಲ ಬೆಲೆಯ ಮೇಲೆ ನೀಡಬೇಕಿದೆ ರಿಯಾಯ್ತಿ :** ಎಲ್ಲಾ ಸಮಸ್ಯೆಗಳ ಮೂಲ ಇದು. ಇಂದು ಸಮಾಜದಲ್ಲಿ ಎಲ್ಲಾ ವಸ್ತು ಅಥವಾ ಸೇವೆಯ ಬೆಲೆ ಹೆಚ್ಚಲು ಪರೋಕ್ಷವಾಗಿ ಇದೆ ಕಾರಣ. ತೈಲ ಬೆಲೆಯನ್ನ ಅಂತರರಾಷ್ಟ್ರೀಯ ಬೆಲೆಗೆ ತಕ್ಕಂತೆ ಹೆಚ್ಚು ಕಡಿಮೆ ಮಾಡುವ ನಿರ್ಧಾರಕ್ಕೆ ಕೇಂದ್ರ ಸರಕಾರ ಬಂದಿದ್ದೇ ತಪ್ಪು. ಅಲ್ಲದೆ ಗಮನಿಸಿ ನೋಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಕುಸಿದಾಗ ಅದು ಗ್ರಾಹಕನಿಗೆ ತಲುಪಿಲ್ಲ. ಹೆಚ್ಚಾದ ಮರುಘಳಿಗೆಯಲ್ಲಿ ಅದನ್ನ ಗ್ರಾಹಕ ಭರಿಸಬೇಕಾಗಿದೆ. ಇದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

3. **ಏರುತ್ತಿರುವ ಡಾಲರ್ ಬೆಲೆ ಅಥವಾ ಕುಸಿಯುತ್ತಿರುವ ರೂಪಾಯಿ :** ಇದೊಂದು ದೊಡ್ಡ ತಲೆನೋವು. ಡಾಲರ್‌ನ ಬೇಡಿಕೆ ಎಷ್ಟಿದೆ ಎಂದರೆ ಜಗತ್ತಿನಲ್ಲಿ ಯಾವುದೇ ವಹಿವಾಟಾಗಲಿ ಇದನ್ನ ಮಾಧ್ಯಮವನ್ನಾಗಿ ಬಳಸುತ್ತಾರೆ, ಜೊತೆಗೆ ಚೀನಾದ ಫಾರಿನ್ ಕರೆನ್ಸಿ ರಿಸರ್ವ್ ಹೆಸರಲ್ಲಿ ಸಾಕಷ್ಟು ಅಮೆರಿಕನ್ ಡಾಲರ್‌ಗಳನ್ನು ಹಿಡಿದಿಟ್ಟಿದೆ. ಅಮೇರಿಕಾ ತನ್ನ ಫೆಡರಲ್ ಬಡ್ಡಿ ದರವನ್ನ ವರ್ಷದಿಂದ ವರ್ಷಕ್ಕೆ ಏರಿಸುತ್ತಿದೆ. ಸ್ಥಳೀಯ ಹೂಡಿಕೆದಾರರು ಕೂಡ ಕುಸಿಯುತ್ತಿರುವ ರೂಪಾಯಿ ಕಂಡು ಡಾಲರ್ ನಲ್ಲಿ ಹೂಡಿಕೆ ಮಾಡುತ್ತಾರೆ. ಈ ಎಲ್ಲಾ ಕಾರಣಗಳಿಂದ ಡಾಲರ್ ಬಲಿಷ್ಠವಾಗುತ್ತಿದೆ, ರೂಪಾಯಿ ಸೊರಗುತ್ತಿದೆ.

